ಸಭೆಯ ಮುಂದಿಡಲಾಗುವ ಕಾಗದಪತ್ರಗಳು

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಬೆಂಗಳ ಮತ್ತು ಮೈಸೂರು ಏಕ್ಸ್‌ಪ್ರೆಸ್ ಹೈವೆ ಬಗ್ಗೆ ಈ ಕೆಳಕಂಡ ಕಾಗದಪತ್ರಗಳನ್ನು ಸಭೆಯ ಮ ಮಂಡಿಸುತ್ತೇನೆ. ಕರಾರಿನ ನಕಲು ಪ್ರತಿ, ತಾಂತ್ರಿಕ ವರದಿ ಪ್ರತಿ, ಸಂಬಂಧಿಸಿದ ಆದೇಶ ನಡವಳಿಕೆಗಳು ಹಾಗೂ ಪತ್ರಗಳ ನಕಲುಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ

+ ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಸನ್ಮಾನ್ಯ ಅಧ್ಯಕ್ಷರೆ, ಈ ಸಭೆಯ ಮ ಮಂಡಿಸಿರತಕ್ಕಂಥ ಅನೇಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ತಮ್ಮ ಮುಖೇನ ಸರ್ಕಾರಕ್ಕೆ ಕೆ ಮಾತುಗಳನ್ನು ಹೇಳುವುಧಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ನಾವು ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಆಚರಿಸುತ್ತಿದ್ದೇವೆ. ಅತ್ಯಂತ ಸಂತೋಷದಿಂದ ಆಚರಿಸುವಂಥ ಸಂದರ್ಭದಲ್ಲಿ ನಾವೆಲ್ಲರೂ ಕ ಕುಳಿತು ಚರ್ಚೆ ಮಾಡಿದ್ದೇವೆ. ಸ್ವಾತಂತ್ರ್ಯ ಪೂರ್ವದಲ್ಲಿ ಈ ದೇಶ ಎದುರಿಸುತ್ತಿದ್ದ ಸಮಸ್ಯೆ, ಸ್ವಾತ ನಂತರ ಎದುರಿಸತಕ್ಕಂಥ ಸಮಸ್ಯೆಗಳು ಏನು ಎಂಬುದರ ಬಗ್ಗೆ ಕೆಲವು ಮಾತುಗಳನ್ನಾದರೂ ನ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಹುಶಃ 33 ಕೋಟಿಯಿಂದ 100 ಕೋಟಿ ಜನಸಂಖ್ಯೆಯನ್ನು ನ ತಲುಪಿರುವಂಥ ಸಂದರ್ಭದಲ್ಲಿ ಈ ದೇಶಕ್ಕೆ ಬಂದಂಥ ಸ್ವಾತಂತ್ರ್ಯದ ಪ್ರತಿಫಲ ನಿಜವಾಗಿಯೂ ಕ ಯಾರಿಗೆ ದಕ್ಕಿತು ಎನ್ನತಕ್ಕಂಥದ್ದು ಬಹಳ ಮುಖ್ಯವಾಗಿರತಕ್ಕಂಥ ವಿಷಯ. ಇವೊತ್ತು 50 ವರ್ಷಗ ನಾವು ಮಾಡಿರತಕ್ಕ ಸಾಧನೆ ಆದರೂ ಕೂಡ ಏನು? ನಿಜವಾಗಿಯೂ ಕೂಡ ಇವೊತ್ತು ಸಾಧನ ಫಲ ಯಾರಿಗೆ ತಲುಪಬೇಕಾಗಿದೆ ಅವರಿಗೆ ತಲುಪಿದೆಯೆ ಎಂಬುದು ಬಹಳ ಮುಖ್ಯವಾಗಿರತಕ್ಕಂಥ ಅಧ್ಯಕ್ಷರೆ, ಈಗ ಈ ದೇಶದಲ್ಲಿ ಪೂರ್ವದಲ್ಲಿ ಇರಬಹುದು ಅಥವಾ ನಂತರದಲ್ಲಿ ಇರಬಹು ಇವೊತ್ತು ಈ ದೇಶದ ಜನ ನಂಬಿರತಕ್ಕಂಥದ್ದು ಎರಡು ಉದ್ಯಮದ ಮೇಲೆ. ಶೇಕಡ 80 ರಷ್ಟು ಈ ದೇಶದಲ್ಲಿ ಕೃಷಿಯನ್ನೇ ನಂಬಿರತಕ್ಕಂಥದ್ದು. ಇನ್ನು ಕೆಲವರು ಬೇರೆ ಇರಬಹುದು. ಆದರೆ, ಅದ ಏನಾದರೂ ಕೂಡ ಬದಲಾವಣೆ ಆಗಿದೆಯೆ? ಇವೊತ್ತು ನಮಗೆ ಸ್ವಾತಂತ್ರ್ಯಾನಂತರ ಆಗಿರತಕ್ಕಂಥದ್ದ ನಾವು ಇವೊತ್ತು ಎದುರಿಸತಕ್ಕಂಥ ಸಮಸ್ಯೆ ಆದರೂ ಕೂಡ ಏನು ಎಂಬ ಬಗ್ಗೆ ಚಿಂತನೆ ಮಾಡಬೆ 50 ವರ್ಷಗಳಲ್ಲಿ ನಾವು ಮಾಡಿರತಕ್ಕಂಥ ಸಾಧನೆಗಳು ಏನು ಎನ್ನತಕ್ಕಂಥದ್ದರ ಬಗ್ಗೆ ಕೆ ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ಸ್ವಾತಂತ್ರ್ಯ ಪೂರ್ವದಲ್ಲಿ ಅನೇಕ ಕಾರ್ಖಾನೆಗ ಸ್ಥಾಪನೆ ಮಾಡಿದೆವು. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಇವೊತ್ತು ದೇಶಮಟ್ಟದಲ್ಲಿ ಇರಬಹು ರಾಜ್ಯಮಟ್ಟದಲ್ಲಿ ಇರಬಹುದು. ಇವೊತ್ತು ಅದು ಮಾಡಿರತಕ್ಕಂಥ ಸಾಧನೆಗಳ ಬಗ್ಗೆ ನ ವಿಚಾರಮಾಡುತ್ತಾ ಹೋದರೆ ಬಹುಶಃ ಈ ದೇಶದ ಆರ್ಥಿಕ ಪರಿಸ್ಥಿತಿ ಕುಸಿದುಹೋಗುವುದಕ್ಕೆ ಮು ಕಾರಣ ಏನು ಎನ್ನತಕ್ಕಂಥದ್ದರ ಬಗ್ಗೆ ನಮಗೆ ಅರ್ಥವಾಗುತ್ತದೆ. ಇವೊತ್ತು ನಮ್ಮ ಪಬ್ಲಿಕ್ ಅಂಡರ್‌ಟೇಕಿ

ಎಲ್ಲಾ ರೀತಿಯಲ್ಲೂ ಕೂಡ ಕುಸಿದುಹೋಗಿರುವಂಥ ಸಂದರ್ಭದಲ್ಲಿ ಮತ್ತು ನಾವು ಇವೊತ್ತು ಈ ದೇಶದಲ್ಲಿ ತಯಾರಾಗಿರತಕ್ಕಂಥ ಕಚ್ಚಾಮಾಲು ಇರಬಹುದು, ಯಾವುದೇ ಇರಬಹುದು ಅದನ್ನು ಹೊರದೇಶಕ್ಕೆ ರಫ್ತು ಮಾಡುವಂಥದ್ದರಲ್ಲಿ ಗಣನೀಯ ಮಟ್ಟದಲ್ಲಿ ಕಡಿಮೆ ಆಗಿರುವಂಥ ಸಂದರ್ಭದಲ್ಲಿ ನಮ್ಮ ದೇಶದಮೇಲೆ ಮತ್ತು ರಾಜ್ಯದ ಮೇಲೆ ಸಾಕಷ್ಟು ಹೊರೆಯಾಯಿತು. ಆ ಹೊರೆಯನ್ನು ತೀರಿಸಬೇಕಾದರೆ ಬಹುಶಃ ಅಧ್ಯಕ್ಷರೆ ಇವೊತ್ತು ಒಂದೇ ಮಾತನ್ನು ಹೇಳಬೇಕೆಂದರೆ, ನಮ್ಮ ರಾಜ್ಯಕ್ಕೆ ಇರತಕ್ಕಂಥ ಸಂಪನ್ಮೂಲದಲ್ಲಿ ನಮಗೆ ಶೇಕಡ 60 ರಿಂದ 70ರಷ್ಟು ಭಾಗವನ್ನು ನಾವು ರೆಗ್ಯುಲರ್ ಸ್ಯಾಲರೀಸ್‌ಗೆ, ಮೈನ್‌ಟೆನೆನ್ಸ್‌ಗೆ ಕೊಡುವಂಥ ಸಂದರ್ಭದಲ್ಲಿ ನಮ್ಮ ಅಭಿವೃದ್ಧಿ ಕಾರ್ಯಗಳಿಗಾಗಿ ಬಹಳಷ್ಟು ಕಡಿಮೆ ಹಣ ಉಳಿಯತಕ್ಕಂಥ ಸಂದರ್ಭ ಬಂತು ಈಗ ಏನಾಯಿತು,

8.30 ಪಿ.ಎಂ.

ಈ ದೇಶಕ್ಕೆ ಒಂದು ಆರ್ಥಿಕ ನೀತಿಯನ್ನು ಕೊಟ್ಟು ಹೊಸ ಸ್ವರೂಪವನ್ನು ಕೊಟ್ಟು ಆರ್ಥಿಕವಾಗಿ ಪುನಃಶ್ಚೇತನಗೊಳ್ಳುವುದಕ್ಕೆ ನಮ್ಮ ಹಿಂದಿನ ಅರ್ಥ ಸಚಿವರಾದಂತಹ ಮಾನ್ಯ ಮನಮೋಹನಸಿಂಗ್‌ರವರು ಅವಕಾಶವನ್ನು ಮಾಡಿಕೊಟ್ಟರು. ಆ ಲಿಬರ್‌ಲೈಜೇಷನ್ ಪಾಲಿಸಿಯನ್ನು ನಾವು ಎಷ್ಟರಮಟ್ಟಿಗೆ ಸುಧಾರಿಸುವುದಕ್ಕೆ ಸಾಧ್ಯವಾಯಿತೆಂದು ಚಿಂತನೆ ಮಾಡಬೇಕಾಗುತ್ತದೆ. ಇವತ್ತು ನಮ್ಮ ಪಬ್ಲಿಕ್ ಅಂಡರ್ ಟೇಕಿಂಗ್‌ಗಳು ಶೇ.100ರಷ್ಟು ಫೈಲ್ಯೂರು ಆಗಿರುವಂತಹ ಸಂದರ್ಭದಲ್ಲಿ ನಮ್ಮ ಎಕ್ಸ್‌ಪೋರ್ಟ್ ಡಿಕ್ರೀಸ್ ಆಗಿರುವಂತಹ ಸಂದರ್ಭದಲ್ಲಿ ನಮ್ಮಲ್ಲಿರುವಂತಹ ಸುಧಾರಣೆಯನ್ನು, ಸರಳೀಕರಣ ನೀತಿಯನ್ನು ನಾವು ಎಷ್ಟರಮಟ್ಟಿಗೆ ನಮ್ಮ ರಾಜ್ಯಕ್ಕೆ ಉಪಯೋಗ ಮಾಡಿಕೊಂಡಿದ್ದೇವೆಂಬುದು ಬಹಳ ಮುಖ್ಯವಾದಂತಹ ಅಂಶವಾಗುತ್ತದೆ. ನಾನು ಒಂದೇ ಒಂದು ಕೈಗಾರಿಕೆಯ ಬಗ್ಗೆ ವಿಶ್ಲೇಷಣೆಯನ್ನು ಮಾಡುವುದಕ್ಕಿಚ್ಛಿಸುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿರುವಂತಹ ಎನ್.ಜಿ.ಇ.ಎಫ್ ಫ್ಯಾಕ್ಟರಿ ಇಂತಹ ಅನೇಕ ದೊಡ್ಡ ಫ್ಯಾಕ್ಟರಿಯನ್ನು ಸ್ಥಾಪನೆ ಮಾಡಿ ಸುಮಾರು ಹನ್ನೆರಡು ಸಾವಿರ ಕೋಟಿ ರೂಪಾಯಿಗಳಿಂದ ಹದಿಮೂರು ಸಾವಿರ ಕೋಟಿ ರೂಪಾಯಿಗಳ ಕ್ಯಾಪಿಟಲ್‌ನಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಿ ಇವತ್ತು ಇವುಗಳ ಪರಿಸ್ಥಿತಿ ಏನಾಗಿದೆ ಎಂದರೆ ಇದರಿಂದ ನಾವು ಲಕ್ಷಾಂತರ ಜನರಿಗೆ ಉದ್ಯೋಗವನ್ನು ಕೊಟ್ಟಿದ್ದರೂ ಸಹಿತ ಇವತ್ತು ನಮ್ಮ ಪೈಡ್ ಆಪ್ ಕ್ಯಾಪಿಟಲ್ ಏನು ಇದೆ, ಅದನ್ನೇ ತಿಂದು ಹೋಗತಕ್ಕಂಥ ಮತ್ತು ಅದು ನಷ್ಟ ಹೊಂದಿರುವಂಥಾದ್ದು ಆಗಿದೆ. ಇವತ್ತು ಈ ಕೈಗಾರಿಕೆಗಳು ಮುಚ್ಚಿಹೋಗುವಂತಹ ಪರಿಸ್ಥಿತಿಗೆ ಬಂದಿದೆ. ಇವತ್ತು ಈ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸು ವಂಥಾದ್ದರಲ್ಲಿ ನಾವು ಎಷ್ಟರಮಟ್ಟಿಗೆ ಪ್ರಯೋಜನವನ್ನು ಪಡೆದುಕೊಂಡಿದ್ದೇವೆಂಬುದು ಬಹಳ ಮುಖ್ಯವಾದಂಥಾದ್ದು. ಇದಕ್ಕೆ ಕಾರಣವೇನು ಎಂದರೆ ಇವತ್ತು ನಮ್ಮಲ್ಲಿರುವಂತಹ ಸಾರ್ವಜನಿಕ ಉದ್ಯಮಗಳಲ್ಲಿರುವಂತಹ ಕೇವಲ ಮ್ಯಾನ್ ಪವರ್‌ನಲ್ಲೆ ಮಾಡುವಂಥಾದ್ದು, ಎಸ್ಟಾಬ್ಲಿಶ್‌ಮೆಂಟ್ ಮಾಡುವಂಥಾದ್ದು, ಇದಕ್ಕೆ ಹೆಚ್ಚಿನ ಹಣವನ್ನು ಖರ್ಚು ಮಾಡುವಂಥಾದ್ದು ಮತ್ತು ಲಾಸ್ ಮಾಡುವಂಥಾದ್ದು, ಮತ್ತು ರಿಸರ್ಚ್ ಅಂಡ್ ಡೆವಲಪ್‌ಮೆಂಟಿಗೆ ಯಾವುದೇ ರೀತಿಯ ಗಮನವನ್ನು ಕೊಡದೇ ಇರುವುದರಿಂದ ಅನಿವಾರ್ಯವಾಗಿ ಇವತ್ತು ಹೊಸ ಆರ್ಥಿಕ ನೀತಿಯನ್ನು ಕಂಡುಕೊಂಡು

ಅದಕ್ಕೆ ಹೊಂದಿಸಿಕೊಂಡು ಹೋಗುವಂತಹ ಪರಿಸ್ಥಿತಿಗೆ ಬಂತು. ಇವತ್ತು ನಾವು ಕೈಗಾರಿಕೆಗಳನ್ನು ಅಪ್‌ಟುಡೇಟ್ ಮಾಡಬೇಕಾಗುತ್ತದೆ, ಒಂದು ಕಡೆ ಕೈಗಾರಿಕೆ ಮತ್ತೊಂದು ಕಡೆ ಕೃಷಿ ರಂಗ, ಇನ್ನೊಂದು ಕಡೆ ನಾವುಗಳು, ಇವತ್ತು ಸಾಕಷ್ಟು ವಿದ್ಯಾವಂತರುಗಳು ಅವರು ಇಂಜಿನಿಯರ್ ಗ್ರಾಜ್ಯುಯೇಟ್‌ಗಳು, ಮೆಡಿಕಲ್ ಗ್ರಾಜ್ಯುಯೇಟ್ಸ್, ಟೆಕ್ನಿಕಲ್ ಗ್ರಾಜ್ಯುಯೇಟ್ಸ್ ಇರಬಹುದು. ಇವತ್ತು ಸಾವಿರಾರು ಜನರು, ಲಕ್ಷಾಂತರ ಜನರು ಎಂಪ್ಲಾಯ್‌ಮೆಂಟ್ ಆಫೀಸ್‌ನಲ್ಲಿ ನೋಂದಣಿ ಮಾಡಿದ್ದಾರೆ. ಪಬ್ಲಿಕ್ ಸರ್ವೀಸ್ ಕಮೀಷನ್‌ನಿಂದ ಒಂದು ನೂರು ಹುದ್ದೆಗಳಿಗೆ ಕರೆದಾಗ ಅದಕ್ಕೆ ಲಕ್ಷಗಟ್ಟಲೆ ಅರ್ಜಿಗಳು ಬರುತ್ತವೆ. ಒಂದು ಪೋಸ್ಟ್‌ಗೆ ಸಾವಿರಾರು ಜನರು ಅಪ್ಲಿಕೇಷನ್ ಹಾಕುವಂತಹ ಸಂದರ್ಭವಿರುವುದರಿಂದ ಇವತ್ತು ಈ ನಿರುದ್ಯೋಗವೆಂಬುದು ಯಾವ ರೀತಿಯಲ್ಲಿ ಬಗೆಹರಿಸುವುದಕ್ಕೆ ಸಾಧ್ಯವೆಂಬುದನ್ನು ಯೋಚನೆ ಮಾಡಿದರೆ ಒಂದು ಕಡೆ ಕೃಷಿ ಮತ್ತೊಂದು ಕಡೆ ನಮ್ಮ ಕೈಗಾರಿಕೆಗಳು ಇದನ್ನು ಬಿಟ್ಟರೆ ಇನ್ನಾವ ಮಾರ್ಗದಿಂದಲೂ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, ಈ ಕೈಗಾರಿಕೆಗಳು ಬೆಳೆಯುವುದರಿಂದ ನಾನಾ ರೀತಿಯ ಡೆವಲಪ್‌ಮೆಂಟ್‌ಗಳು ಆಗುವುದಕ್ಕೆ ಸಾಧ್ಯವಿದೆ. ಈಗ ಇರುವಂತಹ ನಿರುದ್ಯೋಗ ಪರಿಸ್ಥಿತಿಗೆ ಇದರಿಂದ ಆರ್ಥಿಕವಾಗಿ ಶಕ್ತಿಯನ್ನು ಕೊಟ್ಟ ಹಾಗೆ ಆಗುತ್ತದೆ. ಇದರಿಂದ ನಮ್ಮ ಎಕ್ಸ್‌ಪೋರ್ಟ್ ಅನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದು ಕೃಷಿ ಇರಬಹುದು ಅಥವಾ ಬೇರೆ ಯಾವುದೇ ಉದ್ಯಮಗಳಿರಬಹುದು. ಅವುಗಳಿಗೆ ಮೂಲಭೂತವಾಗಿ ಶಕ್ತಿ ಕೊಡುವಂಥಾದ್ದಕ್ಕೆ ಇರುವಂಥಾದ್ದು ಈ ಕೈಗಾರಿಕೆಗಳು ಆಗಿವೆ. ಈ ಉದ್ಯಮಗಳನ್ನು ಬೆಳೆಸುವುದಕ್ಕೆ ನಾವು ಎಷ್ಟರಮಟ್ಟಿಗೆ ಪ್ರಯತ್ನವನ್ನು ಮಾಡಿದ್ದೇವೆ, ಎಷ್ಟರಮಟ್ಟಿಗೆ ನಾವು ಲಿಬರಲೈಜೇಷನ್ ಅನ್ನು ಅಡಾಪ್ಟ್ ಮಾಡಿಕೊಂಡು ಮಾಡುತ್ತಿದ್ದೇವೆಂಬುದು ಬಹಳ ಮುಖ್ಯವಾದಂತಹ ವಿಷಯವಾಗಿದೆ. ಈಗ ನನಗೆ ಸಮಯ ಬಹಳ ಕಡಿಮೆ ಇರುವುದರಿಂದ ನಾನು ಕೆಲವು ಸಲಹೆಗಳನ್ನು ಕೊಡುತ್ತೇನೆ. ಇವತ್ತು ನಮ್ಮಲ್ಲಿ ಮುಖ್ಯವಾಗಿ ಗುಡಿಕೈಗಾರಿಕೆಗಳು, ಟೈನಿ ಇಂಡಸ್ಟ್ರೀಗಳು ಇರುವಂಥಾದ್ದು. ಅವುಗಳ ಪರಿಸ್ಥಿತಿ ಏನಾಗಿದೆ, ಇವತ್ತು ಇವುಗಳನ್ನು ಉಳಿಸುವುದಕ್ಕೋಸ್ಕರ ನಾವು ಖಾದಿಬೋರ್ಡ್‌ಗಳನ್ನು ಇಟ್ಟುಕೊಂಡಿದ್ದೇವೆ. ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳು ಅವು ಸುಣ್ಣ ಸುಡುವಂಥಾದ್ದು ಇರಬಹುದು, ಕಮ್ಮಾರ ಇರಬಹುದು, ಅಥವಾ ಕುಂಬಾರರು ಇರಬಹುದು. ಅವರಿಗೆ ಸಹಾಯ ಮಾಡುವಂತಹ ಕೈಗಾರಿಕೆಗಳು ಏನು ಇದ್ದವು. ಅವುಗಳು ಮುಚ್ಚಿಹೋಗುವಂಥ ಸ್ಥಿತಿಯಲ್ಲಿ ಖಾದಿ ಬೋರ್ಡ್‌ನ ನೀತಿಗಳು ಬದಲಾಗಿ ಇವತ್ತು ಯಾವ ಉದ್ಯಮಗಳನ್ನು ಮುಂದುವರೆಸುವುದಕ್ಕೆ ಸಾಧ್ಯವಾಗಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾವು ಒಪ್ಪಬೇಕಾಗುತ್ತದೆ. ಇವತ್ತು ಈ ಸರಳೀಕರಣವಾದ ಮೇಲೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಅನ್ನು ಮಾಡಬೇಕಾದಂಥಾದ್ದು ನಮ್ಮ ಮುಖ್ಯವಾದಂತಹ ಜವಾಬ್ದಾರಿಯಾಗಿದೆ. ಇದನ್ನು ಮಾಡಬೇಕಾದರೆ ನಮ್ಮ ಸರ್ಕಾರದಲ್ಲಿರುವಂಥ ಕೆ.ಎಸ್.ಎಸ್.ಐ.ಡಿ ಇರಬಹುದು, ಕೆ.ಐ.ಡಿ.ಬಿ. ಇರಬಹುದು, ಇವುಗಳ ಮುಖಾಂತರ ಇನ್‌ಫ್ರಾಸ್ಟ್ರಕ್ಚರ್‌ನ ಡೆವಲಪ್‌ಮೆಂಟ್ ಮಾಡಬೇಕಾಗುತ್ತದೆ. ಇನ್ನು ಸಣ್ಣ ಕೈಗಾರಿಕೆಗಳ ಪರಿಸ್ಥಿತಿ ಏನಾಗಿದೆ ಎಂಬ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ. ನಾವು ಇದನ್ನು ಮಾಡಬೇಕಾದರೆ ಅರವತ್ತು ಕೋಟಿ ರೂಪಾಯಿಗಳಿಂದ ನೂರು ಕೋಟಿ ರೂಪಾಯಿಗಳವರೆಗೆ

ಮೊತ್ತವನ್ನು ಹೆಚ್ಚು ಮಾಡಿ ಈ ಸಣ್ಣ ಕೈಗಾರಿಕೆಗಳನ್ನು ಮಾಡಬಹುದೆಂಬುದು ಒಳ್ಳೆಯ ಹೆಜ್ಜೆಯಾದರೂ ಕೂಡ ಇವತ್ತು ಈ ಸಣ್ಣ ಕೈಗಾರಿಕೆಗಳು ಎಷ್ಟರಮಟ್ಟಿಗೆ ಮಹತ್ತರವಾದ ಪಾತ್ರವನ್ನು ವಹಿಸುತ್ತಿದೆಂಬ ಅಂಕಿ ಅಂಶವನ್ನು ಕೊಡತಕ್ಕಂಥಾದ್ದು, ನಮ್ಮ ರಾಜ್ಯದಲ್ಲಿರತಕ್ಕಂಥ ಸುಮಾರು ಒಂದು ಲಕ್ಷದ ಎಂಬತ್ತೈದು ಸಾವಿರ ಕಾರ್ಖಾನೆಗಳು ಇವತ್ತು ಸಣ್ಣ ಕೈಗಾರಿಕಾ ವ್ಯಾಪ್ತಿಯಲ್ಲಿ ಬರತಕ್ಕಂಥಾದ್ದು ಇವತ್ತು ಎರಡು ಸಾವಿರದ ಐದುನೂರು ಕೋಟಿರೂಪಾಯಿಗಳ ಬಂಡವಾಳವನ್ನು ತೊಡಗಿಸಿರುವಂಥಾದ್ದು ಮತ್ತು ಹನ್ನೆರಡು ಲಕ್ಷದಿಂದ ಹದಿಮೂರು ಲಕ್ಷ ಜನರಿಗೆ ಉದ್ಯೋಗವನ್ನು ಕೊಡತಕ್ಕಂಥ ಕೈಗಾರಿಕೆಗಳ ಪರಿಸ್ಥಿತಿ ಏನಾಗಿದೆ ಎನ್ನುವ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ಇದರ ಜೊತೆಗೆ ತಾವು ಕೊಟ್ಟಿರುವಂತಹ ಅಂಕಿಅಂಶಗಳ ಪ್ರಕಾರ 10-15 ಸಾವಿರ ಕೈಗಾರಿಕೆಗಳು ಮುಚ್ಚಿ ಹೋಗಿರುವಂತಹ ಸಂದರ್ಭದಲ್ಲಿ ಅದನ್ನು ಯಾವುದೇ ರೀತಿಯಲ್ಲಿ ಪುನಃಶ್ಚೇತನಗೊಳಿಸುವುದಕ್ಕೆ ಸಾಧ್ಯವೇ ಇಲ್ಲವೆಂಬ ಪರಿಸ್ಥಿತಿಗೆ ಹೋಗಿರುವುದನ್ನು ನಾವು ನೋಡಿದಾಗ ಇದರ ಬಗ್ಗೆ ಯಾವುದೇ ದೇಶಗಳು ಇದಕ್ಕೆ ಹೆಚ್ಚು ಒತ್ತನ್ನು ಕೊಡದೇ ಇದ್ದರೆ ಅವುಗಳು ಮುಂದುವರೆಯದೇ ಇದ್ದರೆ ಅವು ಬೆಳೆಯದೆ ಇದ್ದರೆ ಇವತ್ತು ಕೈಗಾರಿಕೆಗಳು ಬೆಳೆಯುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ತಾವು ಕೂಡ ಒಪ್ಪುತ್ತೀರಿ. ಇದರ ಬಗ್ಗೆ ಒಂದು ಉದಾಹರಣೆಯಾಗಿ ಹೇಳುವುದಾದರೆ ಬೆಂಗಳೂರಿನಲ್ಲಿ ಸಣ್ಣ ಕೈಗಾರಿಕೆಗಳು ಕೇಂದ್ರಿಕೃತವಾಗಿ ಬೆಳೆದಿರುವಂತಹದ್ದು ನಾವು ನೋಡುತ್ತಿದ್ದೇವೆ. ಈ ಸಣ್ಣ ಕೈಗಾರಿಕೆಗಳು ಬೆಳೆದು ದೊಡ್ಡ ಕೈಗಾರಿಕೆಗಳಾಗಿರುವುದನ್ನು ನೋಡಿದ್ದೇವೆ. ಇದೇ ಪರಿಸ್ಥಿತಿಯನ್ನು ನಾವು ಪಕ್ಕದ ರಾಜ್ಯಗಳಲ್ಲಿ ನೋಡಿದಾಗ ಅದು ಕೊಯಮತ್ತೂರು ಇರಬಹುದು, ಪೂನ ಇರಬಹುದು ಅಥವಾ ಬಾಂಬೆ ಇರಬಹುದು. ನಾವು ಅವುಗಳನ್ನು ನೋಡಿದಾಗ ಇವತ್ತು ಕೊಯಮತ್ತೂರು ಅಷ್ಟರಮಟ್ಟಿಗೆ ಬೆಳೆಯುವುದಕ್ಕೆ ಹೇಗೆ ಸಾಧ್ಯವಾಯಿತು, ಮತ್ತು ಅದೇ ರೀತಿಯಲ್ಲಿ ಪೂನದಲ್ಲೂ ಎಷ್ಟರಮಟ್ಟಿಗೆ ಬೆಳೆಯುತ್ತಿದೆ. ಆದರೆ, ನಮ್ಮ ಬೆಂಗಳೂರಿನಲ್ಲಿ ಏಕೆ ಬೆಳೆಯುತ್ತಿಲ್ಲವೆನ್ನುವುದನ್ನು ನೋಡಿದಾಗ ಬಹುಶಃ ನಮ್ಮ ನೀತಿ, ನಿರೂಪಣೆಯಲ್ಲಿ ಏನೋ ಒಂದು ವ್ಯತ್ಯಾಸವಿದೆ ಎನ್ನುವುದನ್ನು ತಾವು ಒಪ್ಪಬೇಕಾಗುತ್ತದೆ. ಇವತ್ತು ನಾವು ಈ ಸಣ್ಣ ಕೈಗಾರಿಕೆಗಳ ಪರವಾಗಿ ನಿಲ್ಲಬೇಕಾಗುತ್ತದೆ. ಇದಕ್ಕಾಗಿ ನೀವು ಒಂದು ಕಾನೂನನ್ನು ಮಾಡಿ ಅದನ್ನು ಉಳಿಸುವಂತಹ ಮತ್ತು ಬೆಳೆಸುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ತಾವು ಏನೇ ಒಂದು ತೀರ್ಮಾನವನ್ನು ಮಾಡಬೇಕಾದರೂ ಅದು ಸಣ್ಣ ಕೈಗಾರಿಕೆ, ದೊಡ್ಡ ಕೈಗಾರಿಕೆ ಇರಬಹುದು ಇದಕ್ಕೆ ಯಾವ ರೀತಿಯಲ್ಲಿ ದೊಡ್ಡ ಕೈಗಾರಿಕೆಗಳಿಗೆ ಒಂದು ಮಾನ್ಯತೆಯನ್ನು ಕೊಡುತ್ತೀರಿ ಅದೇ ರೀತಿಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಕೊಡದೆ ಇರುವಂತಹ ಸಂದರ್ಭದಲ್ಲಿ ಇದಕ್ಕೆ ಒಂದು ವಿಶೇಷವಾದಂತಹ ಕಾನೂನನ್ನು ತಂದು ಅದನ್ನು ಉಳಿಸುವಂತಹ ಸಂದರ್ಭ ಇದೆ, ಮತ್ತೆ ಅತೀ ಪ್ರಾಮುಖ್ಯವಾದದ್ದು ಆಗಿದೆ. ಈ ಸಣ್ಣ ಕೈಗಾರಿಕೆಗಳಿಗೆ ಒಂದು ಡೈರೆಕ್ಟರೇಟ್ ಮಾಡಬೇಕಾಗುತ್ತದೆ. ಅವರಲ್ಲಿ ಏನು ಸಮಸ್ಯೆಗಳು ಇವೆ ಎನ್ನುವ ಬಗ್ಗೆ ವಿಚಾರಿಸಬೇಕಾಗುತ್ತದೆ, ಅದನ್ನು ಅರಿಯತಕ್ಕ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಇವತ್ತು ತಾರತಮ್ಯ ಮಾಡುತ್ತಿರುವಂಥಾದ್ದು ಸಬ್ಸಿಡಿ ಕೊಡಬೇಕಾದರೆ, ಪವರ್ ಕೊಡುವಂಥ ವಿಚಾರದಲ್ಲಿ ಬೃಹತ್ ಮತ್ತು ಸಣ್ಣ ಕೈಗಾರಿಕೆಗಳ ಬಗ್ಗೆ ತಾರತಮ್ಯ ಮಾಡುತ್ತಿರುವಂಥಾದ್ದನ್ನು ಮಾಡುತ್ತಿದೆ, ಮತ್ತು ಕಿರುಕುಳ ಕೊಡುವಂಥಾದ್ದು ಆಗುತ್ತಿದೆ.

ಈಗ ಪಲ್ಯೂಷನ್ ಕಂಟ್ರೋಲ್ ಬೋರ್ಡ್‌ನಲ್ಲಿ ಸಣ್ಣ ಕೈಗಾರಿಕೆಯಲ್ಲಿ ಅದರಿಂದ ಪರಿಸರ ಮಾಲಿನ್ಯವಾಗದಿದ್ದರೂ ಕೂಡ ಪಲ್ಯೂಷನ್ ಬೋರ್ಡ್‌ಗೆ ಹೋಗಿ ಕ್ಲಿಯರೆನ್ಸ್ ತೆಗೆದುಕೊಂಡು ಬನ್ನಿ ಎಂದು ಹೇಳಿದರೆ ಅದು ಎಷ್ಟು ಕಷ್ಟ ಎಂಬುದನ್ನು ಸಹ ತಾವು ಚಿಂತನೆ ಮಾಡಬೇಕು. ಇವತ್ತು ಸಣ್ಣ ಕೈಗಾರಿಕೆಗಳಿಗೆ ಎಕ್ಸಮ್ಷನ್ ಕೊಡಬೇಕಾಗುತ್ತದೆ. ಅದನ್ನು ಕೊಡದೆ ಇದ್ದರೆ ಈ ಕೈಗಾರಿಕೆಗಳು ಮುಂದುವರೆಯುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಇನ್ನು 1995-96ರಲ್ಲಿ ಕೈಗಾರಿಕೆಗಳನ್ನು ಬೆಳೆಸುವುದಕ್ಕೋಸ್ಕರ ಹೊಸ ನಿಯಮಗಳನ್ನು ಸರ್ಕಾರಿ ಆಜ್ಞೆಗಳ ಮುಖಾಂತರ ಹೆಚ್ಚು ಒತ್ತನ್ನು ಕೊಟ್ಟಿದ್ದೀರಿ. ಇದನ್ನು ಕೊಡುವಂತಹ ಸಂದರ್ಭದಲ್ಲಿ ಬಹಳ ಪ್ರಾಮುಖ್ಯವಾಗಿರುವಂಥಾದ್ದು ಈ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಉಳಿಯಬೇಕು, ಬೆಳೆಯಬೇಕೆಂದರೆ ನೀವೇ ಒಪ್ಪಿಕೊಂಡಿರುವಂತಹ ಪ್ರೈಸ್ ಪ್ರಿಫರೆನ್ಸ್ ಎನ್ನುವ ಮಾತನ್ನು ಏನು ಹೇಳಿದ್ದೀರಿ, ಇದು ಬರೀ ಪುಸ್ತಕದಲ್ಲಿದೆ. ಅದು ನಿಜರೂಪದಲ್ಲಿ ಆಚರಣೆಗೆ ಬಂದಿಲ್ಲ, ಆದುದರಿಂದ ಯಾವ ಕೈಗಾರಿಕೆಗಳು ಲಾಭದಲ್ಲಿ ಇಲ್ಲ, ಶೇ.15ರಷ್ಟು ಪ್ರೈಸ್ ಪ್ರಿಫರೆನ್ಸ್ ಎಂಬುದು ಎಲ್ಲಾ ಕಾಲದಲ್ಲಿ ಇದೆ. ಇವತ್ತು ದೊಡ್ಡ ಕೈಗಾರಿಕೆಗಳ ವಿರುದ್ಧವಾಗಿ ಶೆ. 15ರಷ್ಟು ಮಾರ್ಜಿನ್ ಕೊಡುತ್ತೇವೆನ್ನುವಂತಹ ಮಾತನ್ನು ಹೇಳಿದ್ದೀರಿ. ಇವತ್ತು ತಾವು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ಯಾವುದಾದರೂ ಒಂದು ಕೈಗಾರಿಕೆ ಲಾಭವಾಗಿದೆ ಎಂಬು ಹೇಳಿದರೆ ನಾನು ಧನ್ಯನಾದೆ. ನನ್ನ ಅನುಭವಕ್ಕೆ ಬಂದಿರುವಂತಹ ಇದುವರೆಗೂ ಶೇ.15ರಷ್ಟು ಪ್ರೈಸ್ ಪ್ರಿಫರೆನ್ಸ್ ಅನ್ನು ಇವತ್ತಿನವರೆಗೆ ಕೈಗಾರಿಕೆಗಳಿಗೆ ಕೊಡುವುದಕ್ಕೆ ಆಗಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಅದನ್ನು ಇವತ್ತು ನೀರು ಕಾನೂನು ತರುವುದರ ಮುಖೇನ It should be a mandatory. Otherwise no small scale industry will survive, ಎನ್ನುವ ಮಾತು ತಮ್ಮ ಗಮನದಲ್ಲಿರಬೇಕು. ಸಣ್ಣ ಕೈಗಾರಿಕೆಗಳು ಎದುರಿಸುತ್ತಿರತಕ್ಕಂಥ ಮತ್ತೊಂದು ಮುಖ್ಯವಾದ ತೊಂದರೆ ಎಂದರೆ ಪರ್ಚೇಸ್ ಪ್ರಿಫರೆಸ್ಸ್. ನೀವು ಯಾವುದೇ ಒಂದು ಎಸ್‌ಎಸ್ಐ ಗೆ ಇಟ್ಟಿರತಕ್ಕಂಥ ಪ್ರಾಡಕ್ಟ್ ಇದ್ದಾಗ, ಅದನ್ನು ಕೊಳ್ಳುಬೇಕಾದರೆ ನೀವು ಯಾವಾಗಲೂ ಕೂಡ ಎಸ್‌ಎಸ್ಐ ಯೂನಿಟ್‌ನಿಂದಲೇ ತೆಗೆದುಕೊಳ್ಳಬೇಕು, ಪರ್ಚೇಸ್ ಪ್ರಿಫರೆನ್ಸ್‌ಗೆ ಕೊಡಬೇಕಾಗುತ್ತದೆ, against major industries. ಆ ಕೆಲಸವಾಗುತ್ತಿಲ್ಲ ಆ ಕೆಲಸವನ್ನು ಇವತ್ತು ಮಾಡಿದರೆ ಮಾತ್ರ ಸಹಾಯವಾಗುತ್ತದೆ, ಇಲ್ಲದಿದ್ದರೆ ಇಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಮತ್ತೊಂದು ಪೇಮೆಂಟ್ ಪ್ರಿಫರೆನ್ಸ್ ಇರಬೇಕಾಗುತ್ತದೆ, ಯಾರೇ ಇವತ್ತು ಕಚ್ಚಾಮಾಲನ್ನು ತಯಾರು ಮಾಡಿ ಸರಬರಾಜು ಮಾಡಿದಂಥ ಸಂದರ್ಭದಲ್ಲಿ, ಅದು ಮೇಜರ್ ಇಂಡಸ್ಟ್ರೀಸ್ ಆಗಿರಬಹುದು ಅಥವಾ ಗೌರ್ನಮೆಂಟ್ ಅಂಡರ್‌ಟೇಕಿಂಗ್ಸ್ ಆಗಿರಬಹುದು, ಯಾವುದಾಗಿದ್ದರೂ ಕೂಡ ಆ ಪೇಮೆಂಟ್‌ನಲ್ಲಿ ಪ್ರಿಫರೆನ್ಸ್ ಅನ್ನು ಕೊಡಬೇಕಾಗುತ್ತದೆ, ಪೇಮೆಂಟ್ ಪ್ರಿಫರೆನ್ಸ್ ಕೊಡುವುದಕ್ಕಾಗದಿದ್ದರೆ ಇದಕ್ಕೆ ಕಾಲವನ್ನು ನಿಗದಿ ಮಾಡಿ, ಅದನ್ನು ಕೊಡುವುದಕ್ಕಾಗದೆ ಇರುವಂಥ ಸಂದರ್ಭದಲ್ಲಿ ನೀವು ಬಡ್ಡಿಯನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದರೆ ಮಾತ್ರ ಈ ಒಂದು ಕೈಗಾರಿಕೆಗಳು ಉಳಿಯುವುದಕ್ಕೆ ಸಾಧ್ಯ ಇಲ್ಲದಿದ್ದರೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಇವತ್ತು ಮುಖ್ಯವಾಗಿ ಇರತಕ್ಕಂಥ ತೊಂದರೆ ಏನೆಂದರೆ, ವರ್ಕಿಂಗ್ ಕ್ಯಾಪಿಟಲ್‌ಗೆ ಸಂಬಂಧಿಸಿದಂತೆ ಒಂದು ಕಾನೂನನ್ನು ತಂದು ಇವೆಲ್ಲವನ್ನು ಕಾನೂನಿನಲ್ಲಿ ಮಾರ್ಪಾಡು

ಮಾಡಿದಂಥ ಸಂದರ್ಭದಲ್ಲಿ ಈ ಕೈಗಾರಿಕೆಗಳನ್ನು ಪುನಶ್ಚೇತನ ಮಾಡುವುದಕ್ಕೆ ಸಾಧ್ಯ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಂದು ಪ್ರಮುಖವಾದದ್ದು, ನಿಮ್ಮಲ್ಲಿರುವ ಗ್ರಾಮೀಣ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚು ಮಾಡಬೇಕೆನ್ನುವ ಒಂದು ನಿಲುವನ್ನು ಇಟ್ಟುಕೊಂಡು ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಬಹಳ ಪ್ರಯತ್ನಪಡುತ್ತಿದ್ದೀರಿ. ಈಗ ನೀವು ಗ್ರಾಮೀಣ ಕೈಗಾರಿಕೆಗಳನ್ನು ಎತಕ್ಕೋಸ್ಕರ ಮಾಡಬೇಕು ಎಂದರೆ ಅಲ್ಲಿರತಕ್ಕಂಥ ಒಂದು ಖನಿಜ ಸಂಪತ್ತಿರಬಹುದು, ಯಾವುದೋ ಒಂದು ಸ್ಕೇರ್ ಮೆಟೀರಿಯಲ್ ಇರಬಹುದು, ಆ ಮೆಟೀರಿಯಲನ್ನು ಕನ್‌ಸ್ಯೂಮ್ ಮಾಡಿ ಗ್ರಾಮೀಣ ಜನರಿಗೆ ಉದ್ಯೋಗ ಕೊಡುವ ದೃಷ್ಟಿಯಿಂದ ಇವತ್ತು ಮುಖ್ಯವಾಗಿ ಗ್ರಾಮೀಣ ಕೈಗಾರಿಕೆಗಳನ್ನು ಪ್ರಮೋಟ್ ಮಾಡಬೇಕು; ಇವತ್ತು ಅದು ನಡೆಯುತ್ತಿದೆಯೇ? ಇವತ್ತು ಗ್ರಾಮೀಣ ಕೈಗಾರಿಕೆಗಳಿಗೆ ಯಾವ ರೀತಿಯ ಒತ್ತನ್ನು ಕೊಟ್ಟಿದ್ದೀರಿ? ಇವತ್ತು ನೀವು ಪವರ್ ಕೊಡುತ್ತಿದ್ದೀರಾ ಇವತ್ತು ಪವರ್ ಕೊಡುತ್ತಿಲ್ಲ, ಅದ್ಕಕೆ ನಾನು ಒಂದು ಸಲಹೆ ಮಾಡುತ್ತೇನೆ. ನೀವು ಗ್ರಾಮೀಣ ಕೈಗಾರಿಕೆಗಳನ್ನು ಮಾಡುವ ಸಂದರ್ಭದಲ್ಲಿ ಅದಕ್ಕೆ ಪ್ರತ್ಯೇಕವಾಗಿ ಕೆಇಬಿಯಿಂದ ಫೀಡರ್ ಕೊಡಬೇಕಾಗುತ್ತದೆ. ಇವತ್ತು ಅವರಿಗೆ ವೋಲ್ಟೇಜ್ ತೊಂದರೆ ಇಲ್ಲದ ರೀತಿಯಲ್ಲಿ ಯಾವ ರೀತಿಯಾಗಿ ಇವತ್ತು ಪಟ್ಟಣ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಬೆಳೆಸುತ್ತೀರಿ, ಎಷ್ಟು ಗಂಟೆಯವರೆಗೆ ಪವರ್ ಕೊಡುತ್ತೀರಿ, ಅದೇ ರೀತಿಯಲ್ಲಿ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಪವರ್ ಅನ್ನು ಕೊಟ್ಟಂಥ ಸಂದರ್ಭದಲ್ಲಿ ಮಾತ್ರ ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೆಗಳು ಇವತ್ತು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಿ. ಎ. ಮೊಯಿದ್ದೀನ್ (ಸಣ್ಣ ಕೈಗಾರಿಕೆಗಳ ಸಚಿವರು) : ತಾಲ್ಲೂಕು ಮಟ್ಟದಲ್ಲಿ, ಗ್ರಾಮೀಣ ಮಟ್ಟದಲ್ಲಿ ಕೈಗಾರಿಕೆಗಳನ್ನು ಮಾಡಬೇಕೆಂದು ಏನು ಹೇಳುತ್ತಿದ್ದೀರಿ, ಇದಕ್ಕೆ ಕೇಂದ್ರ ಮಟ್ಟದಲ್ಲೂ, ರಾಜ್ಯಮಟ್ಟದಲ್ಲೂ ಒತ್ತನ್ನು ನಾವು ಕೊಡುತ್ತಿದ್ದೇವೆ. ಅದಕ್ಕಾಗಿ ನಾವು ಇವತ್ತು ತಾಲ್ಲೂಕು ಕೈಗಾರಿಕೆಗಳ ಕೇಂದ್ರವೆಂದು ಮಾಡಿದ್ದೇವೆ. ಅಲ್ಲಿ ನಮ್ಮ ಅಪ್ರೋಚ್ ಏನೆಂದರೆ, ನೀವು ಈಗ ಹೇಳಿದ ರೀತಿ ಈ ತೊಂದರೆಗಳಿವೆ. ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೆಯನ್ನು ಮಾಡಿದವನಿಗೆ ಇವತ್ತು ಅವನಿಗೆ 24 ಗಂಟೆ ಪವರ್ ಸಿಗುತ್ತಿಲ್ಲ. ಅವನು ಉತ್ಪಾದನೆಯನ್ನು ಮಾಡುವುದಕ್ಕಾಗುವುದಿಲ್ಲ, ಅಂಥ ಸಂದರ್ಭದಲ್ಲಿ ಅವು ಸಿಕ್ ಆಗುವ ಅವಕಾಶಗಳು ಹೆಚ್ಚಿದ್ದಾವೆ; ಹಾಗಿದ್ದಾಗ ನಾವು ಈಗ ಕ್ಲಸ್ಟರ್ ಅಪ್ರೋಚ್ ಅನ್ನು ತರುತ್ತಿದ್ದೇನೆ. ಒಂದೊಂದು ತಾಲ್ಲೂಕಿಗೂ ಕೂಡ ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಮಾಡಬೇಕೆನ್ನುವ ಉದ್ದೇಶವನ್ನು ನಾವು ಇಟ್ಟುಕೊಂಡು, Our approach will be a cluster approach. ಒಂದು, ತಾವು ಹೇಳಿದ ಹಾಗೆ ಅಲ್ಲಿರುವ ಕಚ್ಚಾ ಮಾಲನ್ನು ಉಪಯೋಗ ಮಾಡಬೇಕೆನ್ನುವುದು ಮತ್ತು ಅಲ್ಲಿರುವ ಯುವಕರು ಯಾರಿದ್ದಾರೆ ಅವರು ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗಬಾರದು ಎನ್ನುವ ಉದ್ದೇಶವನ್ನಿಟ್ಟುಕೊಂಡು ಇದನ್ನು ಮಾಡುತ್ತೇವೆ. I fully agree with you. ಅದರ ಬಗ್ಗೆ ನಾನು ಉತ್ತರ ಕೊಡುವ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ತಾವು ತಾಲ್ಲೂಕು ಮಟ್ಟದಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಮಾಡಬೇಕೆನ್ನುವ ಉದ್ದೇಶ ಇಟ್ಟುಕೊಂಡಿದ್ದೇವೆಂದು ಹೇಳಿದಿರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಅನ್ನು ಮಾಡಬೇಕಾದಾಗ ಯಾವ ರೀತಿಯಾದ ನಿಯಮಗಳಿರಬೇಕು?

ನೀವು ಯಾವುದೊ ಒಂದು ಬಿಸಿನೆಸ್ ಸೆಂಟರ್ ಇರಬಹುದು, ಬಹಳ ಪ್ರಾಮುಖ್ಯವಾದ ಕೇಂದ್ರಗಳನ್ನು ತಾವು ಆಯ್ಕೆ ಮಾಡಿ ಅಲ್ಲಿ ನೀವು ಮೊದಲೇ ಸೈಟನ್ನು ಅಕ್ವೈರ್ ಮಾಡಬೇಕು. ಮೊಯಿದ್ದೀನ್‌ರವರೆ ಇಂಡಸ್ಟ್ರಿಯಲ್ ಎಸ್ಟೇಟ್ ಮಾಡುವ ಮೊದಲು ನೀವು ಸೈಟನ್ನು ಅಕ್ವೈರ್ ಮಾಡಿಕೊಳ್ಳಬೇಕು. ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಮಾಡುವುದಾದರೆ, ನೀವು ಶೆಡ್‌ಗಳನ್ನು ಕಟ್ಟುವುದಕ್ಕೆ ಹೋಗಬಾರದು. ದಯಮಾಡಿ ಏನಪ್ಪ ಮಾಡಬೇಕೆಂದರೆ, ನಿವೇಶನ ವಿಸ್ತೀರ್ಣ ಮೂವತ್ತು ನಲವತ್ತು ಇರಬಹುದು, ನಲವತ್ತು ಅರವತ್ತು ಇರಬಹುದು, ಆ ರೀತಿಯ ನಿವೇಶನಗಳನ್ನು ವಿಂಗಡಿಸಿ, ಇವತ್ತು ಅಲ್ಲೇ ಇರುವ ಎಜುಕೇಟೆಡ್ ಅನ್ ಎಂಪ್ಲಾಯ್ ಯಂಗ್ಸ್ಟರ್ಸ್ ಅನ್ನು ಮೋಟಿವೇಟ್ ಮಾಡಿ, ಆ ಎಂಟರ್‌ಪ್ರಿನರ್‌ಶಿಪ್‌ನವರಿಗೆ ಬರೆದು ಅವರಿಗೆ ಒಂದು ತರಬೇತಿ ಶಿಬಿರವನ್ನು ಏರ್ಪಡಿಸಬೇಕಾಗುತ್ತದೆ. ನೀವು ಸ್ಥಳೀಯವಾಗಿ ಎಲ್ಲಿಯವರೆಗೆ ಎಂಟರ್‌ಪ್ರಿನರ್‌ಶಿಪ್ ಅನ್ನು ಅಭಿವೃದ್ಧಿಪಡಿಸುವುದಿಲ್ಲ ಅಲ್ಲಿಯವರೆಗೆ ಈ ಹೊಸ ಕೈಗಾರಿಕೆಗಳನ್ನು ಮಾಡುವುದಕ್ಕೆ ಯಾರೂ ಮುಂದೆ ಬರುವುದಿಲ್ಲ. ಇವತ್ತು ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಬೇಕು, ನಿಜವಾಗಲೂ ನೀವು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕೆಂದರೆ ಬಹಳ ಪ್ರಮುಖವಾಗಿರುವುದೆಂದರೆ, ಎಂಟರ್‌ಪ್ರಿನರ್‌ಶಿಪ್ ಅನ್ನು ಅಭಿವೃದ್ಧಿಪಡಿಸುವುದು. ಅದನ್ನು ಯಾವ ರೀತಿ ಮಾಡುವುದಕ್ಕೆ ಸಾಧ್ಯ? ಇವತ್ತು ಎಂಟರ್‌ಪ್ರಿನರ್‌ಶಿಪ್ ಅನ್ನು ಅಭಿವೃದ್ಧಿಪಡಿಸಬೇಕೆಂದರೆ ಈ ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಅನ್ನು ಮಾಡಬೇಕು, ಅಲ್ಲಿಗೆ ಫುಲ್ ಪವರ್ ಕೊಡತಕ್ಕಂಥದ್ದು ಇರಬೇಕು, ನೀರಿನ ಸೌಲಭ್ಯ ಕೊಡುವುದಕ್ಕೆ ಅವಕಾಶವಿರಬೇಕು, ಆಗ ನೀವು ಎಂಟರ್ ಪ್ರಿನರ್‌ಶಿಪ್ ಡೆವಲಪ್ ಮಾಡಿ, ಅವರು ಕೈಗಾರಿಕೆಯನ್ನು ಮಾಡುವ ನಿಟ್ಟಿನಲ್ಲಿ ಇವತ್ತು ಸಾಕಷ್ಟು ಸಮಸ್ಯೆಯನ್ನು ಪರಿಹರಿಸಲು ಸಾಧ್ಯ. ನಾನು ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ, ಈಗ ಏನಾಗಿದೆ, ನಮ್ಮಲ್ಲಿ ರೋಜ್‌ಗಾರ್ ಯೋಜನೆಯಲ್ಲಿ, ಇವತ್ತು ಗ್ರಾಮಾಂತರ ಪ್ರದೇಶದಲ್ಲಿರುವ ಯುವಕರೇನಿದ್ದಾರೆ, ನಿರುದ್ಯೋಗಿ ಪದವೀಧರರು ಏನಿದ್ದಾರೆ ಅವರಿಗೆ ಸಹಾಯ ಮಾಡುವಂಥ ಒಂದು ಸ್ಕೀಂ ಇದೆ. ಇವತ್ತು ನಾನು ಕೇಳುತ್ತೇನೆ, ನಿಯಮದ ಪ್ರಕಾರ ಇವತ್ತು ಒಂದು ಲಕ್ಷ ರೂಪಾಯಿಗಳವರೆಗೆ ಕೂಡ ಸಾಲ ಕೊಡುವುದಕ್ಕೆ ಅವಕಾಶವಿದೆ. ಇವತ್ತು ಒಂದು ಜಿಲ್ಲೆಗೆ ಒಂದರಿಂದ ಒಂದೂವರೆ ಸಾವಿರ ಟಾರ್ಗೆಟ್ ಕೊಡುವಂಥ ಸಂದರ್ಭದಲ್ಲಿ ಇವತ್ತು ಯಾರು ಅಚೀವ್ ಮಾಡಿದ್ದಾರೆ, ಯಾರು ಹೆಚ್ಚು ಬೇಡಿಕೆಯನ್ನು ಸಲ್ಲಿಸಿದ್ದಾರೆನ್ನುವ ಮಾತನ್ನು ತಾವು ಹೇಳಬೇಕಾಗುತ್ತದೆ, ಇವತ್ತು ನಾನು ಹೇಳುತ್ತೇನೆ, ಸಮೀಕ್ಷೆ ಮಾಡಿ ನೋಡಿದ್ದೇವೆ, ಇವತ್ತು ಸಾಲವನ್ನು ಏತಕ್ಕೆ ಕೊಡುತ್ತಾರೆ, ಇವತ್ತು ಒಂದು ಪ್ರಾಜೆಕ್ಟ್‌ಗೆ ಒಂದು ಲಕ್ಷ ರೂಪಾಯಿ ಖರ್ಚಾಗುವುದಾದರೆ ಇವತ್ತು ಬ್ಯಾಂಕಿನಿಂದ ಕೊಡುವುದು ಕೇವಲ ಇಪ್ಪತ್ತು ಸಾವಿರ. ಅದು ಯಾವ ರೀತಿಯ ಪ್ರಾಜೆಕ್ಟ್‌ಗೆ ಕೊಡುತ್ತಾರೆಂದು, ಏಲ್ಲೋ ಒಂದು ಪೆಟ್ಟಿ ಶಾಪ್‌ಗೆ ಅಂಗಡಿ ಇಡುವುದಕ್ಕೋ ಅಥವಾ ಸಣ್ಣ ತರಕಾರಿ ವ್ಯಾಪಾರ ಮಾಡುವುದಕ್ಕೆ ಕೊಡುತ್ತಾರೆ. ಇವತ್ತು ನಿಜವಾಗಿ ರೋಜಗಾರ್ ಯೊಜನೆ ಏನು ಇದೆ ಅದು ನಿರುದ್ಯೋಗಿ ಪದವೀಧರರಿಗೆ ನಿಜವಾಗಿಯೂ ಒಂದು ಒಳ್ಳೆಯ ಯೋಜನೆಯಾಗಿದೆ. ಅದರಲ್ಲಿ ಎಂಟರ್‌ಪ್ರಿನರ್‌ಶಿಪ್ ಡೆವಲಪ್ ಮಾಡುವುದಕ್ಕೆ ಅವಕಾವಿದೆ, ದಯಮಾಡಿ ತಾವು ಅದರ ಬಗ್ಗೆ ಹೆಚ್ಚು ಚಿಂತನೆಯನ್ನು ಕೊಡಬೇಕಾಗುತ್ತದೆ. ಇವತ್ತು ತಾಲ್ಲೂಕು, ತಾಲ್ಲೂಕುಗಳಲ್ಲಿ ಕುಳ್ಳಿರಿಸಿಕೊಂಡು

ಬ್ಯಾಂಕ್‌ನವರಿಂದ ಇಂಟರ್‌ವ್ಯೂ ಮಾಡಿಸುತ್ತೀರಿ, ನಿರುದ್ಯೋಗಿ ಪದವೀಧರರು ಆ ಇಂಟರ್‌ವ್ಯೂ ಮುಂದೆ ಹೋದಾಗ ಅವರಿಗೆ ಒಂದು ಪ್ರಾಜೆಕ್ಟ್ ರಿಪೋರ್ಟ್ ಕೊಡಿಸುವಂಥ ಕೆಲಸವಾಗಬೇಕು. ಅದನ್ನು ತಾವು ಕೈಗಾರಿಕಾ ಇಲಾಖೆಯಿಂದ ಅಲ್ಲಿರುವ ಸ್ಥಳೀಯವಾಗಿರುವ ಕಚ್ಚಾಮಾಲನ್ನು ಆಧರಿಸಿ ಈ ಪ್ರಾಜೆಕ್ಟ್ ರಿಪೋರ್ಟ್‌ಗಳನ್ನು ನೀವು ಮಾಡಬೇಕು. ಈಗಾಗಲೇ ಇಡೀ ರಾಜ್ಯಾದ್ಯಂತ ಸಮೀಕ್ಷೆ ಮಾಡಿ ಯಾವ್ಯಾವ ತಾಲ್ಲೂಕಿನಲ್ಲಿ, ಯಾವ್ಯಾವ ಭಾಗದಲ್ಲಿ ಏನೇನು ಪ್ರಾಜೆಕ್ಟ್ ಮಾಡಬೇಕು ಎನ್ನುವುದರ ಬಗ್ಗೆ ನಿಮಗೆ ಮಾಹಿತಿ ಇರುವ ಸಂದರ್ಭದಲ್ಲಿ ಆ ಪ್ರಾಜೆಕ್ಟ್ ರಿಪೋರ್ಟ್ ಅನ್ನು ಮಾತ್ರ ಎಂಟರ್‌ಪ್ರಿನರ್ಸ್‌ಗೆ ಕೊಡಿಸಿ ಅವರಿಗೆ ತರಬೇತಿಯನ್ನು ಕೊಟ್ಟು, ಇವತ್ತು ಅವರು ಯಾವರೀತಿಯಾಗಿ ಒಂದು ಇಂಡಸ್ಟ್ರೀಯನ್ನು ಡೆವಲಪ್ ಮಾಡಬೇಕೆನ್ನುವ ಮಾಹಿತಿಯನ್ನು ಕೊಡದಿದ್ದರೆ, ಇವತ್ತು ಕೈಗಾರಿಕೆಗಳು ಬರುವುದಕ್ಕೆ ಸಾಧ್ಯವೇ ಇಲ್ಲ, ಇವತ್ತು ಏನೋ ಅಲ್ಪಸ್ವಲ್ಪವಿರುವ ಹಣವನ್ನು ನೀವು ಹಾಕಿ ಅದನ್ನು ಕೂಡ ಕಳೆದುಕೊಂಡು ಇವತ್ತು ಬ್ಯಾಂಕಿಗೆ ಕಟ್ಟುವಂಥ ಒಂದು ಪರಿಸ್ಥಿತಿ ಕೂಡ ಬರುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಆಮೇಲೆ ನಿಮ್ಮ ಸಣ್ಣ ಕೈಗಾರಿಕೆಗಳು ಇವತ್ತು ಎದುರಿಸುತ್ತಿರುವ ಕಷ್ಟವೇನೆಂದರ, ಇವತ್ತು ಬಹಳ ಕೈಗಾರಿಕೆಗಳು ಮುಚ್ಚಿಹೋಗುತ್ತಿರುವುದಕ್ಕೆ ಕಾರಣವೇನೆಂದರೆ ಇವತ್ತು ಕೆ.ಇ.ಬಿ.ಯಿಂದಾಗಿ ತೊಂದರೆ ಆಗಿರುತ್ತದೆ. ಇವತ್ತು ಕೆಇಬಿನಲ್ಲಿ ತಾವು ಏನು ಮಾಡಿದ್ದೀರಿ, ಮೊನ್ನೆ ಹೊಸದಾಗಿ ಒಂದು ನೀತಿಯನ್ನು ಮಾಡಿದ್ದೀರಿ. ಸಣ್ಣ ಕೈಗಾರಿಕೆಗಳಿಗೆ ಇವತ್ತು 99 ಹೆಚ್‌ಪಿವರೆಗೆ ಎಲ್‌ಟಿನಲ್ಲಿ ಇದ್ದದ್ದನ್ನು ತೆಗೆದುಕೊಂಡು ಬಂದು 69 ಹೆಚ್‌ಪಿ ಎಂದು ಮಾಡಿದ್ದೀರಿ. ಇವತ್ತು ನಾನು ಹೇಳುತ್ತೇನೆ, ಇವತ್ತು 69 ಹೆಚ್‌ಪಿ ಮೇಲೆ ಮಾಡಬೇಕಾದರೆ 99 ಹೆಚ್‌ಪಿಗೆ ಪವರ್ ಬೇಕಾದರೆ ಹೆಚ್‌ಪಿಗೆ ಹೋಗಬೇಕಾದರೆ ಅವನಿಗೆ ತೊಡಗಿಸತಕ್ಕಂಥ ಶಕ್ತಿ ಇವತ್ತು ಇಲ್ಲ. ಇವತ್ತು 67 ನಿಂದ 99 ಹೆಚ್‌ಪಿಗೆ ಹೋಗಬೇಕಾದರೆ ಅವನು ಸುಮಾರು ಕನಿಷ್ಟ ಒಂದು ಒಂದೂವರೆ ಲಕ್ಷ ರೂಪಾಯಿಯನ್ನಾದರೂ ಕೂಡ ಹೆಚ್ಚು ಬಂಡವಾಳ ಹಾಕಬೇಕಾದರೆ, ಬ್ಯಾಂಕ್‌ನವರು ಕೊಡುವುದಿಲ್ಲ, ಒಪ್ಪುವುದಿಲ್ಲ, ಕಷ್ಟವಾಗುತ್ತದೆ. ನಾನು ಹೇಳುವುದೇನೆಂದರೆ ಇವತ್ತು 99 ಹೆಚ್‌ಪಿ ಯವರೆಗೆ ಏನು ಎಲ್‌ಟಿ ಇದೆ ಅದನ್ನೇ ಮುಂದುವರೆಸಿಕೊಂಡು ಹೋಗುವ ನೀತಿಯನ್ನು ತಾವು ಅನುಸರಿಸಬೇಕು, ಅದೇ ರೀತಿಯಾಗಿ ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಂದು ಬಹಳ ಪ್ರಾಮುಖ್ಯವಾಗಿ, ನಮ್ಮ ಸರ್ಕಾರದ ಮಟ್ಟದಲ್ಲಿರುವ ಮೂಲತಃ ಒಂದು ಟೆಕ್ಸಾಕ್ ಎನ್ನುವುದು ಏನಿದೆ ಆ ಟೆಕ್ಸಾಕ್ ಅಡಿಯಲ್ಲಿ ಇಂಥ ಸಂದರ್ಭದಲ್ಲಿ ಯಾವುದೊ ಒಂದು ಎಂಟರ್‌ಪ್ರಿನರ್ ಹೋದಂಥ ಸಂದರ್ಭದಲ್ಲಿ ಅದಕ್ಕೆ ಹೆಚ್ಚು ಶಕ್ತಿಯನ್ನು ಕೊಟ್ಟು, ಮಾಹಿತಿಯನ್ನು ಕೊಟ್ಟು, ಲೇಟೆಸ್ಟಾಗಿರುವಂಥ ಪ್ರಾಜೆಕ್ಟ್ ರಿಪೋರ್ಟ್ ಮಾಡಿಕೊಡುವಂಥ ಕೆಲಸ ಇವತ್ತು ಟೆಕ್ಸಾಕ್‌ನಿಂದ ಆಗುತ್ತಿಲ್ಲ. ಟೆಕ್ಸಾಕ್ ಎನ್ನುವ ಬೋರ್ಡ್ ಇದೆ, ಅಲ್ಲಿ ಹೋಗಿ ಯಾರು ಪ್ರಯೋಜನೆ ಪಡೆಯದಿರುವ ಸಂದರ್ಭವಿರುವುದರಿಂದ, ಆ ಟೆಕ್ಸಾಕ್ ಅನ್ನು ಬೆಳೆಸುವ ಕೆಲಸವನ್ನು ಇವತ್ತು ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಪ್ರಮುಖವಾದದ್ದು, ಸಣ್ಣ ಕೈಗಾರಿಕೆಗಳನ್ನು ಉಳಿಸುವುದಕ್ಕೆ ತಾವು ಏನು ಕೆಲಸ ಮಾಡಿದ್ದೀರೆನ್ನುವುದಾಗಿದೆ. ನಾನು ಒಂದೇ ಒಂದು ಉದಾಹರಣೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ,

ಇವತ್ತು ಸಿಕ್ ಯೂನಿಟ್ಸ್ ಏನಿವೆ ಅವುಗಳ ರಿವೈವಲ್‌ಗೋಸ್ಕರ ಇವತ್ತು ಕೇಂದ್ರ ಸರ್ಕಾರ ವಿಶ್ವಬ್ಯಾಂಕ್‌ನಿಂದ ಸುಮಾರು 1,600 ಕೋಟಿ ರೂಪಾಯಿಗಳನ್ನು ನಿಗದಿ ಮಾಡಲಾಗಿದೆ. 1600 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿರಬೇಕಾದರೆ, ಇವತ್ತು ರಾಜ್ಯಮಟ್ಟದಲ್ಲಿ ಬೇರೆ ಬೇರೆ ರಾಜ್ಯಗಳು ಆ ಹಣವನ್ನು ಪಡೆಯುವಂಥ ಕೆಲಸವನ್ನು ಮಾಡಿವೆ ಎನ್ನುವ ಸಂದರ್ಭದಲ್ಲಿ ನಾವು ನಮ್ಮ ರಾಜ್ಯಮಟ್ಟದಲ್ಲಿ ಯಾವ ಕೆಲಸವನ್ನು ಮಾಡಿದ್ದೇವೆ? ಇವತ್ತು ಎಷ್ಟರಮಟ್ಟಿಗೆ ಆ ಹಣವನ್ನು ಉಪಯೋಗಿಸುವ ಕೆಲಸವನ್ನು ಮಾಡಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಭಾರಿ ಕೈಗಾರಿಕಾ ಮಂತ್ರಿಗಳಾದ ದೇಶ್‌ಪಾಂಡೆಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದನ್ನು ನೋಡಿದೆ. ಇವತ್ತು ಸಣ್ಣಕೈಗಾರಿಕೆಗಳ ರಿವೈವಲ್‌ಗೋಸ್ಕರ ಕೇಂದ್ರ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸಿದ್ದೇವೆನ್ನುವ ಮಾತನ್ನು ಹೇಳಿದರು. ನಾನು ಹೇಳುವುದೇನೆಂದರೆ, 1600 ಕೋಟಿ ರೂಪಾಯಿಗಳ ಹಣವಿರಬೇಕಾದರೆ, ನಮ್ಮ ರಾಜ್ಯದವರೆ ಪ್ರಧಾನಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಕೂಡ ಅದನ್ನು ನಾನು ಪ್ರಸ್ತಾಪ ಮಾಡಿದ್ದೆ. ತಾವು ರಾಜ್ಯ ಸರ್ಕಾರದ ಮಟ್ಟದಲ್ಲಿ ಮುಂದೆ ಹೋಗಿ, ಹಣವನ್ನು ತರಿಸತಕ್ಕಂಥ ಕೆಲಸವನ್ನು ಇವತ್ತು ಮಾಡಬೇಕು. ಇವತ್ತು ಕೇಂದ್ರ ಸರ್ಕಾರದ ಮಟ್ಟದಲ್ಲಿ ಯಾವ್ಯಾವ ಸವಲತ್ತುಗಳಿವೆ, ಇವತ್ತು ಕೈಗಾರಿಕೆಗಳನ್ನು ಮುಂದುವರೆಸುವುದಕ್ಕೋಸ್ಕರವಿದೆ, ಅದೇನಿದೆ ಎನ್ನುವ ಮಾಹಿತಿಗಳನ್ನು ಕೊಟ್ಟು, ಇವತ್ತು ಕೈಗಾರಿಕೆಗಳ ಸಂಘಗಳಿರುತ್ತವೆ, ಆ ಸಂಘಗಳ ಮುಖೇನ ಪ್ರಸ್ತಾವನೆಗಳನ್ನು ತರಿಸಿಕೊಂಡು ಅದನ್ನು ಬೆಳೆಸತಕ್ಕಂಥ ಕೆಲಸವನ್ನು ಮಾಡಬೇಕು. ಸರ್ಕಾರದಲ್ಲಿ ಸಚಿವರಾಗಿ ಕುಳಿತು ಮಾಡಬೇಕಾದ ಕೆಲಸವೇ ಅದು, ಆ ಕೆಲಸವನ್ನೆ ತಾವು ಮಾಡಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಮುಚ್ಚಿಹೋಗುತ್ತಿರುವ ಕೈಗಾರಿಕೆಗಳನ್ನು ರಿವೈವ್ ಮಾಡುವುದಕ್ಕೆ ಹೊಸ ನೀತಿಯನ್ನು ಹಾಕಿಕೊಂಡಿದ್ದೇವೆನ್ನುವ ಮಾತನ್ನು ಕೂಡ ಹೇಳಿದ್ದೀರಿ. ಅದರ ರಿವೈವಲ್‌ಗೊಸ್ಕರ ತಾವು ಬಡ್ಜೆಟ್‌ನಲ್ಲಿ ಒಂದು ಕೋಟಿ ರೂಪಾಯಿಗಳ ಹಣವನ್ನು ಇಟ್ಟಿರುತ್ತೀರಿ. ಅದರಲ್ಲಿ ತಾವು ಇದುವರೆವಿಗೂ ಬಿಡುಗಡೆ ಮಾಡಿರತಕ್ಕದ್ದು ಕೇವಲ 2 ಲಕ್ಷ ರೂಪಾಯಿಗಳು ಮಾತ್ರ. ರಿವೈವ್ ಮಾಡುವುದರ ಬಗ್ಗೆ ನಿಮಗೆ ಏನಾದರೂ ಕೂಡ ಆಸಕ್ತಿ ಇದೆಯೇ? ಎಂದು ನಾನು ನಿಮ್ಮನ್ನು ಇವತ್ತು ಕೇಳುತ್ತೇನೆ. ಒಂದು ಕೋಟಿ ರೂಪಾಯಿಗಳ ಅಂದಾಜು ಮಾಡಿ, ಇವತ್ತು ನೀವು ಅದಕ್ಕೆ ಬಿಡುಗಡೆ ಮಾಡಿರುವುದು ಕೇವಲ 2 ಲಕ್ಷ ರೂಪಾಯಿಗಳು ಮಾತ್ರ ಎಂದು ಹೇಳಿದರೆ ನೀವು ಯಾವ ರೀತಿಯಾಗಿ ಇಂಡಸ್ಟ್ರೀಗಳನ್ನು ಬೆಳೆಸುವುದಕ್ಕೆ ಸಾಧ್ಯ?

ಅಧ್ಯಕ್ಷರು : ಕಳೆದ 2 ವರ್ಷ 8 ತಿಂಗಳಲ್ಲಿ ಇದೇ ಮೊದಲ ಬಾರಿಗೆ ನಾನು ಇಲ್ಲಿ ಬಿಲ್ ಅನ್ನು ಉಪಯೋಗಿಸುತ್ತಿದ್ದೇನೆ. ಅದನ್ನು ಈ ಹಿಂದೆ ನಾನು ಉಪಯೋಗಿಸಿಯೇ ಇಲ್ಲ. ಅದು ಬೆಲ್ ಹೊಡೆಯುತ್ತದೆಯೋ ಇಲ್ಲವೋ ಎಂದು ಟೆಸ್ಟ್ ಮಾಡಲಿಕ್ಕೆ ಈಗ ಬೆಲ್ ಹೊಡೆದೆ. ತಾವು ಇನ್ನು ಐದು ನಿಮಿಷಗಳಲ್ಲಿ ತಮ್ಮ ಭಾಷಣ ಮುಗಿಸಿ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಅದನ್ನು ತಾವು ಸ್ವಲ್ಪ ರಿಪೀಟೆಡ್ಲಿ ಉಪಯೋಗಿಸಿದರೆ, ನಮಗೂ ಸ್ವಲ್ಪ ಮಾತನಾಡಲಿಕ್ಕೆ ಅವಕಾಶ ಸಿಗಬಹುದೇನೋ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಮತ್ತೊಂದು ಬಹಳ ಪ್ರಾಮುಖ್ಯವಾದ ವಿಚಾರ ಹೇಳುವುದಾದರೆ, ಮಾರ್ಕೆಟಿಂಗ್ ಕಾರ್ಪೋರೇಷನ್ ಎಂಬುದೊಂದು ಕಾರ್ಪೋರೇಷನ್ ಇದೆ. ಈ ಮಾರ್ಕೆಟಿಂಗ್ ಕಾರ್ಪೋರೇಷನ್‌ನಿಂದ ಇವತ್ತು ಸಣ್ಣ ಕೈಗಾರಿಕೆಗಳಿಗೆ ಖಂಡಿತವಾಗಿಯೂ ಪ್ರಯೋಜನವಾಗುತ್ತಿಲ್ಲ. ಅದರಿಂದ ಟ್ರೇಡರ್ಸ್‌ಗೆ ಮಾತ್ರ ಲಾಭವಾಗುತ್ತಿದೆ. ಇವತ್ತು ಕೈಗಾರಿಕೆಗಳ ಹೆಸರಿನಲ್ಲಿ ಸುಮ್ಮನೆ ಒಂದು ನಾಮಿನಲ್ ಆಗಿ ಇಂಡಸ್ಟ್ರಿ ಇದೆ ಎಂದು ಎನ್‌ರೋಲ್ ಮಾಡಿಸಿ, ಒಂದು ಲೆಟರ್ ಹೆಡ್ ಮಾಡಿಸಿಕೊಂಡಿರುವಂತಹವರು ಮಾತ್ರ ಇವತ್ತು ವಹಿವಾಟು ಮಾಡಲಿಕ್ಕೆ ಸಾಧ್ಯವಾಗಿದೆ. ಬೇರೆಯವರಿಗೆ ಸಾಧ್ಯವಾಗಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಹೊಸದಾಗಿ ಆಗಿರತಕ್ಕ ಕಾರ್ಪೋರೇಷನ್ ಅದನ್ನು ಸ್ಟ್ರೀಮ್‌ಲೈನ್ ಮಾಡಿ ಕೇವಲ ಕೈಗಾರಿಕೆಗಳನ್ನು ಮಾಡಿರುವಂತಹವರಿಗೆ ಮಾತ್ರ ಸಹಾಯ ಮಾಡುವ ರೀತಿಯಲ್ಲಿ ಕೆಲಸವನ್ನು ಮಾಡಬೇಕು. ಇವತ್ತು ಮೇಜರ್ ಇಂಡಸ್ಟ್ರೀಗಳಿಗಾಗಿ ಬಿ.ಐ.ಎಫ್.ಆರ್. ಎಂಬುದೊಂದು ಇದೆ. ಇವತ್ತು ಯಾವುದೇ ಒಂದು ಮೇಜರ್ ಇಂಡಸ್ಟ್ರೀಸ್‌ಗೆ ನಷ್ಟ ಆದಂತಹ ಸಂದರ್ಭದಲ್ಲಿ ಅದು ಬಿ.ಐ.ಎಫ್.ಆರ್. ಮುಂದೆ ಹೋಗಬಹುದು, ಅಲ್ಲಿ ಅದರ ಲಾಭ ಮತ್ತು ನಷ್ಟದ ಬಗ್ಗೆ ಚರ್ಚೆ ಮಾಡಿ ಅದನ್ನು ಒಂದು ಸಿಕ್ ಯೂನಿಟ್ ಎಂದು ಘೋಷಣೆ ಮಾಡುತ್ತಾರೆ. ಅದೇ ರೀತಿಯಾಗಿ ಒಂದು ಸಣ್ಣ ಕೈಗಾರಿಕೆ ನಷ್ಟ ಹೊಂದಿದರೆ ಯಾವ ರೀತಿ ಮಾಡುವುದಕ್ಕೆ ಸಾಧ್ಯ? ಅದಕ್ಕೆ ಒಂದು ಅಥಾರಿಟಿಯನ್ನು ಕ್ರಿಯೇಟ್ ಮಾಡಬೇಕಾಗಿರುವುದು ಅತ್ಯಂತ ಪ್ರಾಮುಖ್ಯವಾದ ವಿಚಾರವಾಗಿದೆ. ಎಲ್ಲಿಯವರೆಗೆ ನೀವು, ಸಣ್ಣ ಕೈಗಾರಿಕೆಗಳಿಗೆ ಬಿ.ಐ.ಎಫ್.ಆರ್. ಮಾದರಿಯಲ್ಲಿ ಒಂದು ಅಥಾರಿಟಿ ಕ್ರಿಯೇಟ್ ಮಾಡುವುದಿಲ್ಲವೋ ಅಲ್ಲಿಯವರೆಗೂ ಕೂಡ ಬ್ಯಾಂಕುಗಳು ಸಣ್ಣ ಕೈಗಾರಿಕೆಗಳಿಗೆ ಸಹಾಯ ಮಾಡುವುದಕ್ಕೆ ಮುಂದೆ ಬರುವುದಿಲ್ಲ. ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. This is an SSI year ಅಂತ ಹೇಳಿ ನಾವು ಇವತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಚರಿಸುವಂತಹ ಸಂದರ್ಭದಲ್ಲಿ ಒಂದು ಹೊಸ ತೀರ್ಮಾನವಾದರೂ ನಿಮ್ಮ ಕಡೆಯಿಂದ ಬರಲಿ, ಅದಕ್ಕೆ ಒಂದು ಹೊಸ ಕಾನೂನನ್ನು ಮಾಡತಕ್ಕಂತಹ ಒಂದು ಕೆಲಸವನ್ನು ನೀವು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಕೆ.ಎಸ್.ಎಸ್.ಡಿ.ಸಿ.ಯಲ್ಲಿ ಆಗಿರುವ ಒಂದು ಅವ್ಯವಹಹಾರವನ್ನು ನಾನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೆ.ಎಸ್.ಎಸ್.ಐ.ಡಿ.ಸಿ.ನಲ್ಲಿ ಇವತ್ತು ಸೈಟುಗಳನ್ನು ಮಾಡಿ ಶೆಡ್‌ಗಳನ್ನು ಕಟ್ಟತಕ್ಕಂತಹ ಉದ್ದೇಶ ಇತ್ತು. ನಾನು ಒಂದು ಮಾತನ್ನು ತಮಗೆ ಹೇಳುತ್ತೇನೆ. ಬೆಂಗಳೂರಿನ ಪೀಣ್ಯದಲ್ಲಿರತಕ್ಕಂತಹ, ಸಣ್ಣ ಕೈಗಾರಿಕಾ ನಿಗಮದ ವ್ಯಾಪ್ತಿಯಲ್ಲಿ ಬರರತಕ್ಕಂತಹ ಅನೇಕ ಕಾರ್ನರ್ ಸೈಟುಗಳನ್ನು ಯಾರ ಗಮನಕ್ಕೂ ಬರದೇ, ನೂರಾರು ಸೈಟುಗಳನ್ನು ಅಲಾಟ್ ಮಾಡಿರುವಂಥಾದ್ದನ್ನು ನಾನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ. ಈ ರೀತಿ ಮಾಡಲಿಕ್ಕೆ ಯಾವುದೇ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್‌ಗೆ ಆ ಪವರ್ ಇರಲಿಲ್ಲ. ಮ್ಯಾನೇಜಿಂಗ್ ಡೈರೆಕ್ಟರ್‌ಗೆ ಪವರ್ಸ್ ಇಲ್ಲದಂತಹ ಸಂದರ್ಭದಲ್ಲಿ ಕೂಡ ನೂರಾರು ಸೈಟುಗಳನ್ನು ಯಾವ ರೀತಿಯಾಗಿ ಮಾಡಿದ್ದಾರೆ ಎಂದರೆ, ಕೈಗಾರಿಕೆಗಳನ್ನು ಸ್ಥಾಪಿಸುವಂತಹವರಿಗೆ ಕೊಟ್ಟಿಲ್ಲ, ಅಲ್ಲಿ ಬೇಕಾಬಿಟ್ಟಿ ಅವ್ಯವಹಾರ ನಡೆದು ಯಾರ್ಯಾರಿಗೋ ಕೊಡತಕ್ಕಂತಹ ಕೆಲಸ ಮಾಡಿದ್ದಾರೆ. ಆ ಬಗ್ಗೆ ತಾವು ಉತ್ತರ ಕೊಡಬೇಕಾದಂತಹ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮ್ಯಾನೇಜಿಂಗ್ ಡೈರೆಕ್ಟರ್

ಲೆವೆಲ್‌ನಲ್ಲಿ ಕಳೆದ 2-3 ವರ್ಷಗಳಲ್ಲಿ ಎಷ್ಟೆಷ್ಟು ಸೈಟುಗಳನ್ನು ಅಲಾಟ್ ಮಾಡಿದ್ದಾರೆ? ಯಾವ್ಯಾ ಕೈಗಾರಿಕೆಗಳಿಗೆ ಅಲಾಟ್ ಮಾಡಿದ್ದಾರೆ? ಅದರಲ್ಲಿ ಎಷ್ಟು ಕೈಗಾರಿಕೆಗಳು ಮುಂದೆ ಬಂದವು? ಎನ್ನುವುದರ ಬಗ್ಗೆ ತಾವು ಮಾಹಿತಿಯನ್ನು ಕೊಡಬೇಕು. ಬೆಂಗಳೂರು ಈಗ ಒಂದು ಸಿಲಿಕಾನ್ ವ್ಯಾಲಿ ಆಗಿದೆ ಎಂದು ನಾವೆಲ್ಲರೂ ಕೂಡ ಇವತ್ತು ಭಾಷಣಗಳಲ್ಲಿ ಹೇಳುತ್ತಿದ್ದೇವೆ. ಇವತ್ತು ನಿಜವಾಗಿಯೂ ಕೂಡ ಬೆಂಗಳೂರು ಅಂತಹ ಒಂದು ಸಿಲಿಕಾನ್ ವ್ಯಾಲಿ ಆಗಿರಬೇಕಾದರೆ, ಅದರ ಲಾಭವನ್ನು ನಾವ ಪಡೆಯಬೇಕಾದರೆ ನಾವು ಏನು ಮಾಡಬೇಕು? ಇವತ್ತು ಸರ್ಕಾರದ ಸ್ವಾಮ್ಯದಲ್ಲಿರತಕ್ಕ ಕಿಯೋನಿಕ್ಸ್‌ನ ಪರಿಸ್ಥಿತಿ ಏನಾಗಿದೆ ಎಂದು ನೋಡಿದರೆ, ಅಲ್ಲಿ ಕೇವಲ 'ಕಿಯೋನಿಕ್ಸ್' ಎಂದು ಬೋರ್ಡ್ ಇದೆಯೇ ವಿನಃ ಅಲ್ಲಿರತಕ್ಕ ನೌಕರರಿಗೆ ಇವತ್ತು ಸಂಬಳ ಕೊಡುವುದಕ್ಕೂ ಕೂಡ ಶಕ್ತಿ ಇಲ್ಲ. ಆ ಕಿಯೋನಿಕ್ಸ್‌ನಲ್ಲಿ ಯಾರೋ ಒಬ್ಬರು ಐ.ಎ.ಎಸ್. ಅಥವಾ ಐ.ಪಿ.ಎಸ್. ಅಧಿಕಾರಿಗಳನ್ನು ಹಾಕುತ್ತಾರೆ. ನಮ ಇಂಡಸ್ಟ್ರಿಗಳು ಏನಾದರೂ ಕೂಡ ಇವತ್ತು ಲಾಭ ಮಾಡಬೇಕಾಗಿದ್ದರೆ ಐ.ಎ.ಎಸ್. ಅಥವಾ ಐ.ಪಿ.ಎಸ್. ಅಧಿಕಾರಿಗಳನ್ನು ಅಲ್ಲಿಗೆ ಹಾಕುವುದನ್ನು ನಾವು ಕೈ ಬಿಡಬೇಕು. ಎಲ್ಲಿಯವರೆಗೂ ನೀವ ಅದನ್ನು ಬಿಡುವುದಿಲ್ಲವೋ ಅಲ್ಲಿಯವರೆಗೆ ಕೈಗಾರಿಕೆಗಳು ಉದ್ಧಾರವಾಗುವುದಿಲ್ಲ.

ಅಧ್ಯಕ್ಷರು : ಐ.ಎ.ಎಸ್. : ಐ.ಪಿ.ಎಸ್. ಬಿಟ್ಟು ಮತ್ತೆ ಇನ್ನಾರನ್ನು ಅಲ್ಲಿಗೆ ನೇಮಿಸಬೇಕು?

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ನಾನು ಆ ಬಗ್ಗೆ ತಮಗೆ ಹೇಳುತ್ತೇನೆ ಪಾರ್ಲಿಮೆಂಟ್‌ನ ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯು In the 11th Report presented to the Parliament it says, one of the factors responsible for managerial inefficiency in the public sectors reportedly is the appointment of Civil Servants and otehr without any professional background to the top managerial position in public undertakings. The tendency of appointing a Civil Servant to the top post in the public sector is the fraud with various adverse effects. ಎನ್ನುವ ಮಾತನ್ನು ಸದ ವರದಿಯಲ್ಲಿ ಹೇಳಿದ್ದಾರೆ. ಇವತ್ತು ಕಿಯೋನಿಕ್ಸ್, ಎನ್.ಜಿ.ಇ.ಎಫ್. ಅಥವಾ ಕೆ.ಇ.ಬಿ. ಮತ್ಯಾವುದೆ ಆರ್ಗನೈಸೇಷನ್ ತೆಗೆದುಕೊಂಡರೂ ನೀವು ಅಲ್ಲಿಗೆ ಯಾರನ್ನು ನೇಮಿಸುತ್ತೀರಿ? ಈ ಪರಿಪಾ ಮೊದಲಿನಿಂದಲೂ ಕೂಡ ನಡೆದುಕೊಂಡು ಬರುತ್ತಿದೆ. ನಾನು ಇಲ್ಲ ಎನ್ನತಕ್ಕಂಥ ಮಾತನ ಹೇಳುತ್ತಿಲ್ಲ. ನೀವು ಅವರನ್ನು ತೆಗೆದು, ಟೆಕ್ನಿಕಲ್ ನಾಲೆಡ್ಜ್ ಇರತಕ್ಕಂತಹ ಪ್ರೊಫೆಷನಲ್ಸ್ ಅನ್ನು ಜಾಗಕ್ಕೆ ತರದೇ ಇದ್ದರೆ ಖಂಡಿತವಾಗಿಯೂ ಕೂಡ ಇವತ್ತು ಕೈಗಾರಿಕೆಗಳು ಉದ್ಧಾರವಾಗಲಿ ಸಾಧ್ಯವಿಲ್ಲ ಮತ್ತು ಮುಂದೆ ಬರಲಿಕ್ಕೆ ಸಾಧ್ಯವಿಲ್ಲ ಹಾಗೂ ಆಗುತ್ತಿರುವಂತಹ ನಷ್ಟವನ್ನು ತಪ್ಪಿಸಲಿ ಸಾಧ್ಯವಾಗುವುದಿಲ್ಲ, ಇವತ್ತಿನ ಕಂಪ್ಯೂಟರ್ ಏಜ್‌ನಲ್ಲಿ ನಮ್ಮ ಬೆಂಗಳೂರಿನಲ್ಲಿ ಸಾಕಷ್ಟು ಹಾರ್ಡ್‌ವೇರ್ ಸಾಫ್ಟ್‌ವೇರ್‌ಗಳು ಬದಲಾವಣೆಯಾಗಿ ಡೆವಲಪ್ ಆಗಿರಬೇಕಾದರೆ ತಾವೂ ಕೂಡ ಆ ಉದ್ಯವ ಕೈಗೊಳ್ಳಲು ವಿದ್ಯಾವಂತ ನಿರುದ್ಯೋಗಿ ಪದವೀಧರರು ಕೆ.ಎಸ್.ಎಫ್.ಸಿ. ಅಥವಾ ಮುಂತಾದ ಸಾಲಕ್ಕಾಗಿ ಹೋದಂತಹ ಸಂದರ್ಭದಲ್ಲಿ ಅವರಿಗೆ ಸುಲಭವಾಗಿ ಸಾಲವನ್ನು ಕೊಡುತ್ತಿಲ್ಲ. ಇವತ ನಾನು ಒಂದು ಮಾತು ಹೇಳುತ್ತೇನೆ, ಇವತ್ತು ಕಂಪ್ಯೂಟರ್ ಟೈಪಿಂಗ್ ಗೊತ್ತಿರತಕ್ಕವರಿಗೆ ಆ ಯಂತ್

ಕೊಳ್ಳಲು 30-40 ಸಾವಿರ ರೂಪಾಯಿಗಳು ಬೇಕಾಗುತ್ತವೆ. ನಿರುದ್ಯೋಗಿ ಪದವೀಧರರಿಗೆ ಟ್ರೈನಿಂಗ್ ಕೊಟ್ಟು ಅವರಿಗೆ ಸಾಲವನ್ನು ಕೊಡತಕ್ಕ ಕೆಲಸವನ್ನು ಮಾಡಿದರೆ ಸಾಕಷ್ಟು ಜನರಿಗೆ ನೀವು ಸಹಾಯ ಮಾಡಲಿಕ್ಕೆ ಸಾಧ್ಯವಾಗುತ್ತದೆ, ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇಲ್ಲಿಯವರೆವಿಗೂ ಜಾಬ್ ಟೈಪಿಸ್ಟ್, ಇರತಕ್ಕವರು ಕೂಡ ಕಂಪ್ಯೂಟರ್‌ಗಳನ್ನು ಇಟ್ಟುಕೊಂಡಿಲ್ಲ. ಇವತ್ತಿನ ಕಂಪ್ಯೂಟರ್ ಯುಗದಲ್ಲಿ ಎಷ್ಟರಮಟ್ಟಿಗೆ ನಮ್ಮ ಮಕ್ಕಳಿಗೆ ಅದರಿಂದ ಲಾಭವಾಗುತ್ತಿದೆ ಎಂಬ ಬಗ್ಗೆ ಸರ್ಕಾರದವರು ಆಲೋಚನೆ ಮಾಡಬೇಕು. ಇನ್ನು 2-3 ತಿಂಗಳಲ್ಲಿ ಸಿಂಗಾಪೂರ್ ಟೆಕ್ನಾಲಜಿ ಪಾರ್ಕ್ ಪ್ರಾರಂಭ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಿಜವಾಗಿಯೂ ಕೂಡ ನಾನು ಅದನ್ನು ಪ್ರಶಂಸೆ ಮಾಡುತ್ತೇನೆ. ಬೆಂಗಳೂರಿನಲ್ಲಿ ಇಂತಹ ಒಂದು ಟೆಕ್ನಾಲಜಿ ಪಾರ್ಕ್ ಸ್ಥಾಪಿಸುತ್ತಿರುವುದು ನಿಜವಾಗಿಯೂ ಕೂಡ ಬೆಂಗಳೂರಿಗೆ ದೊರೆತ ಒಂದು ಸುವರ್ಣಾವಕಾಶ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸಿಂಗಾಪುರ್ ಟೆಕ್ನಾಲಜಿ ಪಾರ್ಕ್ ಅನ್ನು ಇವತ್ತು ಪ್ರಾರಂಭ ಮಾಡಿಯಾದ ಮೇಲೆ ಸಾವಿರಾರು ಜನ ಇಂಜಿನಿಯರಿಂಗ್ ಗ್ರಾಜುಯೇಟ್ಸ್, ಟೆಕ್ನಿಕಲ್ ನಾಲೆಡ್ಜ್ ಇರತಕ್ಕವರಿಗೆ, ಕಂಪ್ಯೂಟರ್ ನಾಲೆಡ್ಜ್ ಇರತಕ್ಕವರಿಗೆ ನೌಕರಿ ಸಿಗತಕ್ಕಂತಹ ಒಂದು ಅವಕಾಶ ಇದೆ. ಇದಕ್ಕೆ ಅಡಿಷನಲ್ಲಾಗಿ 60 ಎಕರೆ ಜಾಗ ಬೇಕು ಎಂದು ಅವರು ಕೇಳಿದಾಗ ನೀವು ಅದನ್ನು ಕೊಡುವುದಕ್ಕೆ ಮುಂದೆ ಬಂದಿಲ್ಲ ಎನ್ನುವಂತಹ ಮಾತೂ ಕೂಡ ಇದೆ. ಮೂಲಭೂತವಾಗಿ ಅವರಿಗೆ ಸೌಲಭ್ಯವನ್ನು ತಾವು ಹೆಚ್ಚಿನ ರೀತಿಯಲ್ಲಿ ಮಾಡಿ ಕೊಟ್ಟಿಲ್ಲ ಎನ್ನುವಂತಾದ್ದು ಕೂಡ ಇದೆ. ಆದಷ್ಟು ಬೇಗ ತಾವು ಅದನ್ನು ಪ್ರಾರಂಭ ಮಾಡಿಸಿ, ಅದರ ಪ್ರಯೋಜನ ನಮ್ಮ ಮಕ್ಕಳಿಗೆ ಆಗುವಂತೆ ಸಹಾಯ ಮಾಡಬೇಕು. ಇವತ್ತು ರಫ್ತುಗಳನ್ನು ಹೆಚ್ಚು ಮಾಡುವ ಸಲುವಾಗಿ ಕೇಂದ್ರ ಸರ್ಕಾರದ ಸಹಾಯದಿಂದ ತಾವೊಂದು ಎಕ್ಸ್‌ಪೋರ್ಟ್ ಪ್ರಮೋಷನ್ ಜೋನ್ ಅನ್ನು ಪ್ರಾರಂಭ ಮಾಡಿದ್ದೀರಿ. ಇವತ್ತು ಅದು ಎಲ್ಲಿಗೆ ಬಂತು? ಅದರಿಂದ ಇವತ್ತು ಎಷ್ಟರ ಮಟ್ಟಿಗೆ ಪ್ರಯೋಜನವಾಯಿತು? ಎಂಬ ಬಗ್ಗೆ ತಾವು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಹೇಳಿ. ತಾವು ನಿಜವಾಗಿಯೂ ಏನೊಂದು ಉದ್ದೇಶವನ್ನು ಇಟ್ಟುಕೊಂಡು ಅದನ್ನು ಪ್ರಾರಂಭ ಮಾಡಿದ್ದಿರೋ ಆ ಉದ್ದೇಶ ಸಾಧನೆಯಾಗಲಿಲ್ಲ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ನೀವು ಅವರಿಗೆ ಅಶ್ಯೂರ್ ಮಾಡಿದಂತೆ ವಾಟರ್, ಪವರ್ ಇನ್ನಾವುದನ್ನೂ ನೀವು ಕೊಡಲಿಕ್ಕೆ ಇವತ್ತು ಮುಂದೆ ಬಂದಿಲ್ಲ. ಎಕ್ಸ್‌ಪೋರ್ಟ್ ಪ್ರಮೋಷನ್ ಜೋನ್ ಅನ್ನು ಇವತ್ತು ನೀವು ಮಾಡೆಲ್ಲಾಗಿ ತಯಾರು ಮಾಡಬೇಕು. ನಾನ್ಯಾಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇವತ್ತು ಅದರ ನೆರಳಿನಲ್ಲಿ ಅನೇಕ ಆ್ಯನ್‌ಸಿಲರಿ ಇಂಡಸ್ಟ್ರೀಸ್‌ಗಳು ಬರಲಿಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಹೆಚ್ಚಿನ ಒಂದು ಜವಾಬ್ದಾರಿಕೆ ತಮ್ಮ ಮೇಲೆ ಇದೆ. ಇವತ್ತು ಮಾನ್ಯ ಮೊಯೀದ್ದೀನ್ ಹಾಗೂ ಮಾನ್ಯ ದೇಶಪಾಂಡೆಯವರು ಮನಸ್ಸು ಮಾಡಿದರೆ, ನಿಮ್ಮ ನೀತಿಯನ್ನು ಬದಲಾವಣೆ ಮಾಡಿಕೊಂಡು ತಾವು ಹೆಚ್ಚಿನ ಆಸಕ್ತಿಯನ್ನು ವಹಿಸಿದರೆ, ನಮ್ಮಲ್ಲಿ ಇವತ್ತು ಎಂಪ್ಲಾಯ್‌ಮೆಂಟ್ ಜನರೇಷನ್ ಮಾಡಲಿಕ್ಕೆ ಸಾಧ್ಯವಾಗುತ್ತದೆ, ಹಾಗೂ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ತರುವುದಕ್ಕೆ ಸಾಧ್ಯ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಮಾನ್ಯ ಅಧ್ಯಕ್ಷರು ನನಗೆ ಇಷ್ಟೊಂದು ಸಮಯ ಕೊಟ್ಟು ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ನಾನು ಅವರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್. ಡಿ. ಬಸವರಾಜ್ (ವೀರಾಜಪೇಟೆ) : ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯ ಸಮಿತಿಯ ವಿಚಾರದ ಮೇಲೆ ಮಾತನಾಡಲಿಕ್ಕೆ ತಾವು ಈ ಸಂದರ್ಭ ಒದಗಿಸಿದ್ದಕ್ಕಾಗಿ ಮುಂಚಿತವಾಗಿಯೇ ನನ್ನ ಅಭಿನಂದನೆಗಳನ್ನು ತಮಗೆ ತಿಳಿಸುತ್ತಾ, ಸಮಾಜ ಕಲ್ಯಾಣ ಇಲಾಖೆಯ ಮೇಲೆ ಕೆಲವು ಸಲಹೆಗಳನ್ನು, ನನ್ನ ಕೆಲವು ಅನಿಸಿಕೆಗಳನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ತಿಳಿಸಬಯಸುತ್ತೇನೆ. ಬಹುಶಃ ಮಾನ್ಯ ಮಂತ್ರಿಗಳು ಸದನದಲ್ಲಿ ಇಲ್ಲವೆಂದು ಕಾಣುತ್ತದೆ, ಅಧಿಕಾರಿಗಳು ಇರಬಹುದು.

ಅಧ್ಯಕ್ಷರು : ಚಿಂತಾಮಣಿಯಲ್ಲಿ ಗಲಭೆಯಾಗಿರುವುದರಿಂದ ಮಾನ್ಯ ಸಮಾಜ ಕಲ್ಯಾಣ ಸಚಿವರು ನನ್ನ ಅನುಮತಿ ಪಡೆದು ಅಲ್ಲಿಗೆ ಹೋಗಿದ್ದಾರೆ. ಮಾನ್ಯ ಮಾಲೀಕಯ್ಯ ಗುತ್ತೇದಾರ್‌ರವರು ತಾವು ಹೇಳುವುದನ್ನು ನೋಟ್ ಮಾಡಿಕೊಳ್ಳುತ್ತಾರೆ. ತಾವು ಮಾತನಾಡಿ.

ಶ್ರೀ ಹೆಚ್. ಡಿ. ಬಸವರಾಜ್ : ಆಯಿತು. ಇವತ್ತು ಪರಿಶಿಷ್ಟರ ಕಲ್ಯಾಣ ಸಾಧನೆ ಅತೃಪ್ತಿಕರ ಎನ್ನುವಂತಹ ಕಟು ಸತ್ಯವನ್ನು ನಾನು ತಮ್ಮ ಮೂಲಕ ಈ ಸರ್ಕಾರಕ್ಕೆ ತಿಳಿಸಬೇಕಾಗಿದೆ.

9.00 ಪಿ.ಎಂ.

ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷದ ಸುವರ್ಣಮಹೋತ್ಸವವನ್ನು ನಾವು ಆಚರಣೆ ಮಾಡಿದ್ದೇವೆ. ಇವತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪರಿಸ್ಥಿತಿ ಬಗ್ಗೆ ಅವಲೋಕನ ಮಾಡಿದಾಗ ಅವರ ಸ್ಥಿತಿ ಸ್ವಾತಂತ್ರ್ಯ ಪೂರ್ವದಲ್ಲಿ ಎಷ್ಟು ಇತ್ತೋ ಇವತ್ತು ಕೂಡ ಅದಕ್ಕಿಂತ ಭಿನ್ನ ಆಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಈ ಮಾತನ್ನು ಈಗ ಏಕೆ ಹೇಳುತ್ತಿದ್ದೇನೆಂದರೆ, ನಾವು ಸ್ವಾತಂತ್ರ್ಯ ಪಡೆದ ನಂತರ ಕೋಟ್ಯಾಂತರ ರೂಪಾಯಿ ಹಣವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಏಳಿಗೆಗಾಗಿ, ಅವರ ಅಭಿವೃದ್ಧಿಗಾಗಿ ನಾವು ವೆಚ್ಚಮಾಡಿದ್ದೇವೆ. ಆ ವೆಚ್ಚವ ನ್ನು ನಾವು ಕೇವಲ ಕಾಗದ ಪತ್ರಗಳ ಮೂಲಕ ಮಾಡಿದ್ದೇವೆ ವಿನಃ ನಿಜವಾಗಿ ಕೂಡ ಆ ಹಣ ಅವರಿಗೆ ತಲುಪಿಲ್ಲ. ಈ 50 ವರ್ಷಗಳಲ್ಲಿ ನಾವು ಅವರ ಪರವಾಗಿ ಎಷ್ಟು ಹಣವನ್ನು ಇಟ್ಟು ವೆಚ್ಚ ಮಾಡಿದ್ದೇವೆಯೋ ಅದು ಅವರ ಸಲುವಾಗಿ ಖರ್ಚು ಆಗಿದ್ದರೆ ಬಹುಶಃ ಇವತ್ತು ಅವರ ಪರಿಸ್ಥಿತಿ ಉತ್ತಮವಾಗಿ ಸಮಾಜದಲ್ಲಿನ ಜನರೊಡನೆ ಅವರ ಮಿಳಿತ ತುಂಬಾ ಚೆನ್ನಾಗಿ ಇದ್ದುಕೊಂಡು, ಇವತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಮೀಸಲಾತಿಯ ವ್ಯವಸ್ಥೆಯಲ್ಲಿ ಮುಂದುವರಿಯುವುದಕ್ಕೆ ಅವರು ಅಪೇಕ್ಷೆಪಡುತ್ತಿರಲಿಲ್ಲ ಎನ್ನುವ ವಿಚಾರವನ್ನು ನಾನು ಹೇಳಬೇಕಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡುತ್ತಿದ್ದಂಥ ಹಣ ಸರಿಯಾಗಿ ಬಳಕೆಯಾಗಿ ಖರ್ಚಾಗಿದೆಯೇ ಎನ್ನುವಂಥ ವಿಚಾರವನ್ನು ನಾವು ವಿಮರ್ಶೆ ಮಾಡಿದಾಗ ಬಹುಶಃ ಇನ್ನೊಂದು ಅಂಶವನ್ನು ನಾವು ಇಲ್ಲಿ ಗಮನಿಸಬೇಕಾಗಿದೆ. ಅವರ ಏಳಿಗೆಗಾಗಿ, ಅಭಿವೃದ್ಧಿಗಾಗಿ ಏನು ಹಣವನ್ನು ಮೀಸಲಾಗಿ ಇಡುತ್ತಿದ್ದರೋ, ಆ ಮೀಸಲಾಗಿಟ್ಟ ಪೂರ್ಣ ಹಣವು ಸರಿಯಾದ ರೀತಿಯಲ್ಲಿ ಬಿಡುಗಡೆ ಆಗುತ್ತಿರಲಿಲ್ಲ. ಬಿಡಗಡೆಯಾದಂಥ ಹಣವು ಅವರಿಗೋಸ್ಕರ ವೆಚ್ಚ ಆಗಿದೆಯೇ ಎಂದರೆ ಅದು ಕೂಡ ಸರಿಯಾಗಿ ವೆಚ್ಚ ಆಗುತ್ತಿರಲಿಲ್ಲ. ಈ ನಿಟ್ಟಿನಲ್ಲಿ ನಮ್ಮ ಸರ್ಕಾರದಲ್ಲಿ ಇದ್ದಂಥ ಮಂತ್ರಿಗಳು, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೋಸ್ಕರ ಹಣವನ್ನು ವೆಚ್ಚ ಮಾಡಲಿಕ್ಕೆ ಯಾವ ಅಧಿಕಾರಿಗಳನ್ನು ನಿಯೋಜನೆ ಮಾಡಿದ್ದಾರೋ, ಆ ಅಧಿಕಾರಿಗಳು

ಸರಿಯಾದ ರೀತಿಯಲ್ಲಿ ಕಾರ್ಯಗತ ಮಾಡದೇ ಇದ್ದಂಥ ಸಂದರ್ಭದಲ್ಲಿ ಪ್ರತಿ ವರ್ಷ ಅವಲೋಕನ ಮಾಡಿ ಅಂಥ ಅಧಿಕಾರಿಗಳ ಮೇಲೆ ಸರ್ಕಾರ ಏನಾದರೂ ಉಗ್ರ ಕ್ರಮ ಕೈಗೊಂಡಿದ್ದರೆ ಬಹುಶಃ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಆಗುತ್ತಿತ್ತು ಎನ್ನುವಂಥ ಕಟುಸತ್ಯವನ್ನು ಈ ಸಂದರ್ಭದಲ್ಲಿ ಈ ಸಭೆಗೆ ತಿಳಿಸಬೇಕಾಗಿದೆ. ಈ ಪರಿಶಿಷ್ಟ ಜನರ ಕಲ್ಯಾಣದ ಬಗ್ಗೆ ರಾಜ್ಯದ ಸಾಧನೆ ಅತೃಪ್ತಿಯಲ್ಲಿದೆ ಎನ್ನುವಂಥ ವಿಚಾರವನ್ನು ಇವತ್ತು ನಾನು ಹೇಳುತ್ತಿಲ್ಲ. ಇದನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ರಾಷ್ಟ್ರೀಯ ಆಯೋಗದ ಅಧ್ಯಕ್ಷರಾದಂಥ ಸನ್ಮಾನ್ಯ ಶ್ರೀ ಹೆಚ್. ಹನುಮಂತಪ್ಪ ನವರು 1996ರಲ್ಲಿ ನಮ್ಮ ರಾಜ್ಯಕ್ಕೆ ಭೇಟಿ ನೀಡಿದಂಥ ಸಂದರ್ಭದಲ್ಲಿ, ರಾಜ್ಯದ ಪರಿಸ್ಥಿತಿಯಲ್ಲಿ ಪರಿಶಿಷ್ಟ ಜನಾಂಗದವರಿಗೆ ಮೀಸಲಿಟ್ಟ ಹಣ ಎಷ್ಟು? ಆ ಹಣದಲ್ಲಿ ಎಷ್ಟು ವೆಚ್ಚ ಆಗಿದೆ? ಇವುಗಳನ್ನೆಲ್ಲ ಅವಲೋಕನ ಮಾಡಿದಂಥ ಸಂದರ್ಭದಲ್ಲಿ ಬಹಳಷ್ಟು ಅತೃಪ್ತಿಕರವಾಗಿದೆ ಎನ್ನುವಂಥ ಹೇಳಿಕೆಯನ್ನು ಅವರು ಕೊಟ್ಟು, ಅದನ್ನು ಸರಿಪಡಿಸಿ ಎಂದು ತಿಳಿಸಿದರೂ ಸಹ ಇವತ್ತು ಅಧಿಕಾರಿಗಳು ಇನ್ನೂ ಎಚ್ಚೆತ್ತುಕೊಳ್ಳಲಿಲ್ಲ ಎನ್ನುವ ವಿಚಾರವನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಪರಿಶಿಷ್ಟ ಜನಾಂಗದ ಸಂಖ್ಯೆ ಎಷ್ಟು ಇದೆ? ಅವರ ಸಂಖ್ಯೆಗೆ ಅನುಗುಣವಾಗಿ ಏನಾದರೂ ವಾರ್ಷಿಕ ಬಜೆಟ್‌ನಲ್ಲಿ ಅನುದಾನವನ್ನು ನೀಡುತ್ತಿದ್ದಾರೆಯೇ ಎನ್ನುವ ಅವಲೋಕನ ಮಾಡಿದಾಗ ಅದು ಕೂಡ ಇಲ್ಲಿ ಸಾಧ್ಯವಾಗುತ್ತಿಲ್ಲ, ಸರ್ಕಾರ ಮಾಡುತ್ತಿಲ್ಲ ಎನ್ನುವ ವಿಚಾರವನ್ನು ಸದನಕ್ಕೆ ನಾನು ತಿಳಿಸಲಿಕ್ಕೆ ಇಚ್ಛೆಪಡುತ್ತಿದ್ದೇನೆ. 1991ರ ಜನಗಣತಿ ಪ್ರಕಾರ ನಮ್ಮ ರಾಜ್ಯದಲ್ಲಿರುವ ಜನಸಂಖ್ಯೆ 4,49,77,201 ಇತ್ತು. ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರ ಸಂಖ್ಯೆ 73,69,279 ಅಂದರೆ ಒಟ್ಟು ಪರಿಶಿಷ್ಟ ಜಾತಿಯ ಶೇಕಡಾವಾರು ನಾವು ಗಮನಿಸಿದರೆ 16.38 ಇದ್ದಾರೆ. ಹಾಗೆಯೇ ನಮ್ಮ ರಾಜ್ಯದಲ್ಲಿ 1991ರ ಜನಗತಿಯ ಪ್ರಕಾರ ಪರಿಶಿಷ್ಟ ಪಂಗಡದವರ ಒಟ್ಟು ಜನಸಂಖ್ಯೆ 19,15,691 ಜನ ಇದ್ದಾರೆ. ಅಂದರೆ ನಮ್ಮ ರಾಜ್ಯದಲ್ಲಿರುವ ಇತರೇ ಎಲ್ಲಾ ಜನಾಂಗದವರಲ್ಲಿ ಶೇಕಡಾವಾರು ಹೋಲಿಕೆ ಮಾಡಿದಾಗ ಶೇ. 4.26 ರಷ್ಟು ಇದ್ದಾರೆ. ಇವತ್ತು ನಾವು ಅವರಿಗೆ ಮೀಸಲಾತಿಯನ್ನು ಕೊಡುತ್ತಿರುವುದು ಎಷ್ಟು ಎಂದರೆ, ಶೇಕಡ 15 ರಷ್ಟು ಪರಿಶಿಷ್ಟ ಜಾತಿಯವರಿಗೆ ಮತ್ತು ಶೇಕಡ 3ರಷ್ಟು ಪರಿಶಿಷ್ಟ ಪಂಗಡದವರಿಗೆ ನೀಡುತ್ತಿದ್ದೇವೆ. ಈ 15+3 ಒಟ್ಟು 18 ಪ್ರತಿ ಶತ ಹಣವನ್ನು ಸರ್ಕಾರ ವಾರ್ಷಿಕ ಬಜೆಟ್ ಮಂಡನೆ ಮಾಡುವಂಥ ಸಂದರ್ಭದಲ್ಲಿ ಈ ಜನಾಂಗದ ಸಲುವಾಗಿ ವೆಚ್ಚಮಾಡಲು ಹಣವನ್ನು ಮುಡುಪಾಗಿ ಇಡಬೇಕು ಎನ್ನತಕ್ಕಂಥ ಆದೇಶವನ್ನು ಕೂಡ ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಆದರೆ ಆ ಆದೇಶವನ್ನು ಇದುವರೆಗೂ ಕೂಡ ಸರ್ಕಾರ ಪರಿಪಾಲನೆ ಮಾಡಿಲ್ಲ. ಈ ರಾಜ್ಯದಲ್ಲಿ ಪರಿಶಿಷ್ಟ ಪಂಗಡದವರಿಗೆ ಶೇಕಡ 18ರಷ್ಟು ಹಣವನ್ನು ಸಂಬಂಧಪಟ್ಟ ಸರ್ಕಾರ ವಾರ್ಷಿಕ ಆಯವ್ಯಯದಲ್ಲಿ ಮಂಜೂರು ಮಾಡುತ್ತಿಲ್ಲ, ಇದನ್ನು ಕಡ್ಡಾಯವಾಗಿ ಹಣ ಮಂಜೂರು ಮಾಡಬೇಕೆಂದು. ಸನ್ಮಾನ್ಯ ಶ್ರೀ ಸೀತರಾಮ ಕೇಸರಿಯವರು ಹಿಂದೆ ಕೇಂದ್ರದಲ್ಲಿ ಕಲ್ಯಾಣ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದರು, ಹಿಂದೆ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಮಂತ್ರಿಗಳು ಆಗಿದ್ದಂಥ ಸಂದರ್ಭದಲ್ಲಿ ಒಂದು ಪತ್ರವನ್ನು ಬರೆದಿದ್ದರು, ಹಾಗೆಯೇ ದಿವಂಗತ ಶ್ರೀ ರಾಜೀವ್ ಗಾಂಧಿಯವರು, ಶ್ರೀ ಪಿ.ವಿ. ನರಸಿಂಹರಾವ್ ರವರು, ವಿ.ಪಿ. ಸಿಂಗ್‌ರವರು ಇವರೆಲ್ಲಾ

ಕೇಂದ್ರದಲ್ಲಿ ಪ್ರಧಾನಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ರಾಜ್ಯಕ್ಕೆ ಪತ್ರ ಬರೆದಿದ್ದರು. ಈ ಪತ್ರಗಳ ಉಲ್ಲೇಖನವನ್ನು ಇಲ್ಲಿ ಹೇಳಿ ಸದನದ ಸಮಯವನ್ನು ವ್ಯರ್ಥಮಾಡುವುದಕ್ಕೆ ಹೋಗುವುದಿಲ್ಲ. ಈ ಮಹನೀಯರುಗಳ ಹೆಸರುಗಳನ್ನು ಇಲ್ಲಿ ಉಲ್ಲೇಖ ಮಾಡಿ, ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳಿಗೆ ಪರಿಶಿಷ್ಟ ಜನಾಂಗದವರ ಬಗ್ಗೆ ನಿಜವಾಗಿಯೂ ಕಳಕಳಿ ಇತ್ತು ಎನ್ನುವುದಾದರೆ-ಇನ್ನು ಮುಂದೆಯಾದರೂ ಅವರ ಸಲುವಾಗಿ ಶೇಕಡ18ರಷ್ಟು ಹಣವನ್ನು ಪ್ರತ್ಯೇಕವಾಗಿ ಇಡಬೇಕು. ಮತ್ತು ಆ ಹಣ ಸಮರ್ಪಕವಾಗಿ ಆ ವರ್ಷದಲ್ಲಿಯೇ ವೆಚ್ಚವಾಗುವಂಥ ಕೆಲಸವನ್ನು ಕೂಡ ಅಧಿಕಾರಿಗಳಿಂದ ಮಾಡಿಸಬೇಕು ಎಂದು ತಮ್ಮ ಮೂಲಕ ಸಂಬಂಧಪಟ್ಟ ಮಂತ್ರಿಗಳನ್ನು, ಅಧಿಕಾರಿ ವರ್ಗದವರನ್ನು ಕೇಳಿಕೊಳ್ಳುತ್ತಿದ್ದೇನೆ. ಕಳೆದ ಐದು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಲುವಾಗಿ ಎಷ್ಟು ಹಣ ವೆಚ್ಚಮಾಡಿದ್ದಾರೆ ಎನ್ನುವ ಅಂಕಿಅಂಶಗಳ ಸಮಗ್ರ ಚಿತ್ರಣವನ್ನು ಈ ಸದನದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ವಿಶೇಷ ಘಟಕ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಸುಮಾರು2,087 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಬೇಕಾಗಿದ್ದು ಅದರಲ್ಲಿ 1235 ಕೋಟಿ ರೂಪಾಯಿಯನ್ನು ಮಾತ್ರ ಒದಗಿಸಿದ್ದಾರೆ ಕಳೆದ 5 ವರ್ಷಗಳ ಅಂಕಿ ಅಂಶಗಳನ್ನು ಈ ಸದನದಲ್ಲಿ ಮಂಡನೆ ಮಾಡುತ್ತಿದ್ದೇನೆ. ಹಾಗೆಯೇ ಟ್ರೈಬಲ್ ಸಬ್ ಪ್ಲಾನ್‌ನಲ್ಲಿ 482 ಕೋಟಿ ರೂಪಾಯಿ ಹಣವನ್ನು ಒದಗಿಸಬೇಕಾಗಿತ್ತು. ಆದರೆ ಅದರಲ್ಲಿ ಕೇವಲ 186 ಕೋಟಿ ರೂಪಾಯಿ ಹಣವನ್ನು ಒದಗಿಸಿದ್ದಾರೆ. ಅಂದರೆ ಒಟ್ಟು 2,569 ಕೋಟಿ ರೂಪಾಯಿಗಳನ್ನು ಟಿಎಸ್‌ಪಿ ಮತ್ತು ಎಸ್‌ಪಿಪಿ ಯಿಂದ ಈ ಜನಾಂಗದವರ ಕಲ್ಯಾಣಕ್ಕಾಗಿ ಒದಗಿಸಬೇಕಾಗಿದ್ದು, ಈ ಸರ್ಕಾರದಲ್ಲಿ ಕೇವಲ 1,421 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಉಳಿಕೆಯಾದಂಥ ಸುಮಾರು 1,048 ಕೋಟಿ ರೂಪಾಯಿ ಹಣವನ್ನು ಈ ಜನಾಂಗದವರಿಗೆ ಈ ಸರ್ಕಾರ ಒದಗಿಸಲಿಲ್ಲವೆಂದರೆ, ಈ ಜನಾಂಗದ ಉದ್ದಾರ ಹೇಗೆ ಆಗುತ್ತದೆ? ಈ ಜನಾಂಗದ ಬಗ್ಗೆ ನಿಜವಾದ ಕಳಕಳಿ ಏನು ಎನ್ನುವುದನ್ನು ಸರ್ಕಾರ ಜನತೆಗೆ ತಿಳಿಸಬೇಕು. ಹಾಗೆಯೇ ಈ ಜನತಾದಳ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕೆಲವು ಭರವಸೆಗಳನ್ನು ನೀಡಿತ್ತು. ಆ ಆಶ್ವಾಸನೆಗಳನ್ನು ಹೇಗೆ ಮಾಡಿದೆ ಎನ್ನುವುದನ್ನು ಕೂಡ ಕೆಲವು ಅಂಕಿ ಅಂಶಗಳನ್ನು ಇಲ್ಲಿ ತಮ್ಮ ಮೂಲಕ ಈ ಸದನದಲ್ಲಿರುವಂಥ ಮಂತ್ರಿಗಳಿಗೆ ತಿಳಿಸಲಿಕ್ಕೆ ಇಚ್ಛೆಪಡುತ್ತಿದ್ದೇನೆ. 1993-94ನೇ ಸಾಲಿನಲ್ಲ ವಿಶೇಷ ಘಟಕ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಯವರಿಗೆ 1,633 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಾಗಿತ್ತು. ಆದರೆ, ಖರ್ಚು ಮಾಡಿರುವಂಥದ್ದು ಕೇವಲ646ಕೋಟಿ ರೂಪಾಯಿಗಳು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ಸರ್ಕಾರ ಬಂದ ನಂತರ 1996ನೇ ಸಾಲಿನವರೆಗೆ ಎಷ್ಟು ಹಣವನ್ನು ಮೀಸಲಿಟ್ಟಿದ್ದರು ಮತ್ತು ಎಷ್ಟು ಹಣವನ್ನು ಪರಿಶಿಷ್ಟ ಜಾತಿಯವರಿಗೋಸ್ಕರ ಖರ್ಚು ಮಾಡಿದ್ದಾರೆ ಎನ್ನುವ ಅಂಕಿಅಂಶವನ್ನು ಮತ್ತೊಮ್ಮೆ ಇಲ್ಲಿ ಉಲ್ಲೇಖ ಮಾಡುತ್ತಿದ್ದೇನೆ. ಏಕೆಂದರೆ ಇದಕ್ಕಿಂತ ಹಿಂದಿನ ಸರ್ಕಾರ ಮಾಡದೇ ಇದ್ದರೂ ಈ ಸರ್ಕಾರ ಬಂದನಂತರ ಇವರಾದರೂ ಪರಿಶಿಷ್ಟ ಜಾತಿಯವರಿಗೆ ಅನುಕೂಲ ಮಾಡಬಹುದು ಎನ್ನುವ ನಿರೀಕ್ಷೆ ನಮ್ಮ ಮನಸ್ಸಿನಲ್ಲಿತ್ತು. ಆದರೆ, ಈ ಸರ್ಕಾರ ಅವರ ಬಗ್ಗೆ ನಿರ್ಲಕ್ಷ್ಯ ಭಾವನೆ ತಾಳಿದ್ದಾರೆ. ಇನ್ನು ಮುಂದೆ ನಿರ್ಲಕ್ಷ್ಯ ಭಾವನೆ

ತಾಳಿರುವಂಥದ್ದರಿಂದ ಹೊರಬಂದು ಈ ಜನಾಂಗದ ಬಗ್ಗೆ ನಿಜವಾದ ಕಳಕಳಿಯನ್ನು ಸರ್ಕಾರ ತೋರಿಸಬೇಕು. ಮತ್ತು ಈ ಜನಾಂಗಕ್ಕೆ ಎಷ್ಟು ಹಣವನ್ನು ಮುಡುಪಾಗಿಡುತ್ತೇವೆ, ಎಷ್ಟು ಹಣವನ್ನು ಮಂಜೂರು ಮಾಡುತ್ತಿದ್ದೇವೆ, ಎಷ್ಟು ವೆಚ್ಚ ಮಾಡುತ್ತಿದ್ದೇವೆ, ಎನ್ನುವ ಅಂಕಿಅಂಶಗಳನ್ನು ಪ್ರತಿ ಸಂದರ್ಭದಲ್ಲೂ ಅಂದರೆ ಪರಿಶಿಷ್ಟ ಕಲ್ಯಾಣದ ಬಗ್ಗೆ ಯಾವಾಗ ಜಾಹಿರಾತು ನೀಡುತ್ತೀರೋ ಅಂಥ ಸಂದರ್ಭದಲ್ಲಿ ಸತ್ಯವಾದ ಅಂಕಿಅಂಶಗಳನ್ನು ನೀಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. 1993 ರಿಂದ 1996ರ ವರೆಗೆ ಎಸ್.ಸಿ.ಪಿ.ಯಲ್ಲಿ 1,633 ಕೋಟಿ ರೂಪಾಯಿಗಳಲ್ಲಿ ಕೇವಲ 646 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನು ಗಿರಿಜನರ ಕಲ್ಯಾಣ ಯೋಜನೆಯಲ್ಲಿ 343 ಕೋಟಿ ರೂಪಾಯಿಯಲ್ಲಿ ಕೇವಲ 134 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದರ ಒಟ್ಟು ಅಂಕಿಅಂಶಗಳನ್ನು ನೋಡಿದಾಗ 1,976 ಕೋಟಿ ರೂಪಾಯಿಯಲ್ಲಿ ಕೇವಲ 880 ಕೋಟಿ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ. ಅಂದರೆ ಇದರಲ್ಲಿ ಉಳಿಕೆಯಾದಂಥ 1,093 ಕೋಟಿ ರೂಪಾಯಿಗಳನ್ನು ಈ ಸರ್ಕಾರ ಪರಿಶಿಷ್ಟ ಜಾತಿಯವರ ಹೆಸರಿನಲ್ಲಿ ಮೀಸಲಿಟ್ಟಿದ್ದರೂ ಸಹ ಖರ್ಚು ಮಾಡಿಲ್ಲ ಎನ್ನುವ ಸತ್ಯವನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಿ ಹೇಳಬೇಕಾಗಿದೆ. ವಾರ್ಷಿಕ ಆಯವ್ಯಯದಲ್ಲಿ ಯಾವುದೇ ಕಾರಣಕ್ಕೂ ಸಹ ಇನ್ನು ಮುಂದೆಯಾದರೂ ಕೇಂದ್ರ ಸರ್ಕಾರದ ಆದೇಶವನ್ನು ಪರಿಪಾಲನೆ ಮಾಡಬೇಕೆಂದು ಈ ಸರ್ಕಾರವನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಏಕೆಂದರೆ ಇವರು ಒಟ್ಟು ಜನಸಂಖ್ಯೆಯಲ್ಲಿ ಶೇ. 18 ರಷ್ಟು ಮೀಸಲಿಟ್ಟರೂ ಸಹ ಈಗ ಈ ಪಂಗಡದವರ ಜನಸಂಖ್ಯೆ ಶೇಕಡ 21ಕ್ಕಿಂತಲೂ ಮೀರಿದೆ. ಅಂದರೆ ಈಗ ಸಂವಿಧಾನದಲ್ಲಿ 21 ಪರ್ಸೆಂಟ್ ಎಂದು ಮೀಸಲಾಗಿ ಇಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಸಹ ಶೇಕಡ18 ಪರ್ಸೆಂಟ್‌ನ್ನಾದರೂ ಕೂಡ ಮನಃಪೂರ್ವಕವಾಗಿ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಮತ್ತೆ ಈ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವರಿಗೆ ಎಷ್ಟು ಹಣವನ್ನು ಒದಗಿಸುತ್ತದೆ ಎನ್ನುವಂತಹ ವಿಚಾರವನ್ನು ಸಹ ಈ ಸದನದಲ್ಲಿ ಮಂಡನೆ ಮಾಡಬೇಕಾಗಿದೆ. ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಸರ್ಕಾರ ಶೇಕಡ 18ರಂತೆ ಹಣವನ್ನು ನೀಡಬೇಕಾಗಿದ್ದರೆ ಇವರು ನೀಡುತ್ತಿರುವುದು ಕೇವಲ 9 ರಿಂದ 10 ಪರ್ಸೆಂಟ್ ಮಾತ್ರ. ಅಂದರೆ ಶೇಕಡ 18ರ ಹಣದಲ್ಲಿಯೂ ಕೂಡ ಭಾರಿ ಖೋತವನ್ನು ಮಾಡಿದ್ದಾರೆ. ಅಂದರೆ ಶೇಕಡ 9ರಷ್ಟು ಹಣವನ್ನು ಈ ಜನಾಂಗದವರಿಗೆ ನೀಡುತ್ತಿಲ್ಲ. ಇವರು ನೀಡುತ್ತಿರುವ 9 ರಿಂದ 10 ಪರ್ಸೆಂಟ್ ಹಣವಾದರೂ ಸಮರ್ಪಕವಾಗಿ ಈ ಜನಾಂಗದವರಿಗೆ ವಿನಿಯೋಗವಾಗುತ್ತಿದೆಯೇ ಎಂದು ಅವಲೋಕನ ಮಾಡಿದರೆ ಅದರಲ್ಲಿ ವಾಸ್ತವಾಂಶ ಸ್ಥಿತಿಯನ್ನು ನಾವು ಗಮನಿಸಬೇಕಾಗಿದೆ. ಇವರು ಖರ್ಚು ಮಾಡುತ್ತಿರುವಂತಹ ಹಣ ಕೇವಲ 6 ರಿಂದ 7 ಪ್ರತಿಶತ. ಅಂದರೆ ಕೇವಲ 18 ಪ್ರತಿಶತದಲ್ಲಿ ಮಂಜೂರು ಇವರು ಮಾಡಬೇಕಾಗಿದ್ದ ಹಣದಲ್ಲಿ 9 ಪ್ರತಿಶತ ಹಣವನ್ನು ಮಂಜೂರು ಮಾಡಿ ಅದರಲ್ಲಿ ಕೇವಲ 6 ರಿಂದ 7 ಮಾಡಿ ಇನ್ನು 2 ಪರ್ಸೆಂಟ್ ಆ ಜನಾಂಗದವರಿಗೆ ಮೀಸಲಾಗಿಟ್ಟಿದ್ದ ಹಣವನ್ನು ಬೇರೆ ಕೆಲಸಗಳಿಗೆ ಖರ್ಚು ಮಾಡುತ್ತಿರುವಂತಹ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ತಿಳಿಸಬೇಕಾಗಿದೆ. ಇನ್ನು ಮುಂದೆ ಈ ರೀತಿಯಾಗಿ ಮಾಡುವಂಥದ್ದಕ್ಕೆ ತಾವು ತಡೆಯನ್ನು

ಒಡ್ಡಬೇಕು ಏಕೆಂದರೆ ಆ ಅಧಿಕಾರಿಗಳಲ್ಲಿ ಜವಾಬ್ದಾರಿತನ ಸಂಪೂರ್ಣವಾಗಿ ನಿಂತುಹೋಗಿದೆ. ಇವತ್ತು ನೀವು ಎಷ್ಟು ಹಣವನ್ನು ಕೊಡುತ್ತಿದ್ದೀರಾ ಅಷ್ಟು ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡಬೇಕಾ ಅಥವಾ ಬೇಡವಾ ಎನ್ನುವ ಒಂದು ದ್ವಂದ್ವದಲ್ಲಿದ್ದಾರೆ. ಏಕೆಂದರೆ ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿರುವಂತಹ ಒಂದು ಸಂಪ್ರದಾಯ. ಈ ಸಂಪ್ರದಾಯವನ್ನು ಕೊನೆಗೊಳಿಸುವಂತಹ ಒಂದು ಕೆಲಸವನ್ನು ಈಗಲಾದರೂ ತಾವು ಮಾಡಬೇಕೆಂದು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಇನ್ನೊಂದು ವಿಷಯವನ್ನು ಹೇಳಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. 1990-96ರ ವರೆಗೆ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ 345.18 ಕೋಟಿ ಹಣವನ್ನು ವಾಪಸ್ಸು ಪಡೆದುಕೊಂಡಿದ್ದಾರೆ. ವಾಪಸ್ಸು ಪಡೆದಂತಹ ಹಣವನ್ನು ಕ್ರೋಢೀಕರಿಸಿ ಬೇರೆ ವಿವಿಧ ಇಲಾಖೆಗಳಿಗೆ ಹಂಚಿದ್ದಾರೆ. ಪರಿಶಿಷ್ಟ ಜಾತಿಯವರಿಗೆ, ಅವರ ಅಭಿವೃದ್ಧಿಗಾಗಿ ಮೀಸಲಾಗಿಟ್ಟಂತಹ ಹಣವನ್ನು ವಾಪಸ್ಸು ಪಡೆದು ಬೇರೆ ಕೆಲಸಗಳಿಗೆ ಹಂಚಿದ್ದಾರೆಂದರೆ, ನಿಜವಾಗಿಯೂ ಆ ಜನಾಂಗದವರ ಉದ್ಧಾರವಾಗುತ್ತದೆಯೇ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಕಾರಣ ಸರ್ಕಾರದಲ್ಲಿ ಆ ಜನಾಂಗದವರ ಬಗ್ಗೆ ಸರಿಯಾದಂತಹ ಕಳಕಳಿ ಇಲ್ಲ ಎನ್ನುವಂತಹ ಭಾವನೆ ನನ್ನ ಮನಸ್ಸಿನಲ್ಲಿದೆ. ಸರ್ಕಾರದವರು ಕೊಟ್ಟಂತಹ ಹಣವನ್ನು ಪ್ರಾಮಾಣಿಕ ಅಧಿಕಾರಿಗಳು ಸರಿಯಾಗಿ ವಿನಿಯೋಗ ಮಾಡುತ್ತಿಲ್ಲವೆಂದು ಸರ್ಕಾರಕ್ಕೆ ತಮ್ಮ ಮೂಲಕ ತಿಳಿಸಲಿಕ್ಕೆ ಇಚ್ಛೆಯನ್ನು ಪಡುತ್ತಿದ್ದೇನೆ. ಉದಾಹರಣೆಗಾಗಿ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಆರೋಗ್ಯ ಇಲಾಖೆಯಲ್ಲಿ ಕಳೆದ 9 ವರ್ಷಗಳಿಂದ ಸುಮಾರು ಕೋಟಿಗಟ್ಟಲೆ ಹಣವನ್ನು ಎಸ್‌ಸಿಪಿಯಲ್ಲಿ ಮೀಸಲಾಗಿಟ್ಟು ಆ ಹಣವನ್ನು ಆರೋಗ್ಯ ಅಧಿಕಾರಿಗಳಿಗೆ ವೆಚ್ಚ, ಸಾರಿಗೆ, ಸಂಬಳ ಸಲುವಾಗಿ ಕರ್ಚು ಮಾಡಿದ್ದಾರೆಂದರೆ ಎಷ್ಟರ ಮಟ್ಟಿಗೆ ನಿಮ್ಮ ಯೋಜನೆಗಳು ಕಾರ್ಯಗತವಾಗುತ್ತಿದೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಕಾರಣ ಇಷ್ಟೇ, ಆ ಅಧಿಕಾರಿಗಳು ಯಾವ ಹಣವನ್ನು ಯಾವ ರೀತಿಯಲ್ಲಿ ಖರ್ಚು ಮಾಡಬೇಕೆಂದು ಕೇಳುವಂತಹ ಪರಿಪಾಠವನ್ನು ಇಟ್ಟುಕೊಂಡಿಲ್ಲ. ಅದನ್ನು ಪರಿಶೀಲನೆಯನ್ನು ಮಾಡುವಂತಹ ಅಧಿಕಾರಿಗಳು ಸಹ ನಮ್ಮ ಸಮಾಜ ಕಲ್ಯಾಣ ಇಲಾಖೆಯಲ್ಲಿ ಇಲ್ಲ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಇಷ್ಟು ಹಣವನ್ನು ಖರ್ಚು ಮಾಡಬೇಕೆಂದು ಹೇಳುತ್ತಾರೆ. ಆದರೆ, ಯಾವರೀತಿಯಲ್ಲಿ ಖರ್ಚು ಮಾಡುತ್ತೀರಿ ಎನ್ನುವಂತಹ ಪುನರ್ ವಿಮರ್ಶೆಯನ್ನು ಮಾಡತಕ್ಕಂತಹ ಪದ್ಧತಿಯು ಈ ಒಂದು ಸರ್ಕಾರದಲ್ಲಿ ಇಲ್ಲದೇ ಇರುವುದರಿಂದ ಮೀಸಲಿಟ್ಟಂತಹ ಸಹ ಅವರಿಗಾಗಿ ಖರ್ಚು ಆಗದೇ ಬೇರೆಯವರ ಸಲುವಾಗಿ ಖರ್ಚಾಗುತ್ತಿರುವಂತಹ ವಿಚಾರವನ್ನು ನಾವು ಹೇಳಬೇಕಾಗುತ್ತದೆ. ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಸದನದಲ್ಲಿ ಬಜೆಟ್ ಮಂಡನೆಯನ್ನು ಮಾಡಿದಂತಹ ಸಂದರ್ಭದಲ್ಲಿ ಸಮಾಜ ಕಲ್ಯಾಣ ಸಚಿವರಾದಂತಹ ಕೆ.ಎಂ. ಕೃಷ್ಣರೆಡ್ಡಿಯವರು ಒಂದು ಮಾತನ್ನು ಹೇಳಿದರು. ಕೆಲವು ಯೋಜನೆಗಳನ್ನು ತಾವು ಅನುಪಯುಕ್ತವೆಂದು ಪರಿಗಣನೆ ಮಾಡಿದ್ದೇವೆ. ಆ ಅನುಪಯುಕ್ತವಾದಂತಹ ಯೋಜನೆಯ ಹಣವನ್ನು ಕ್ರೋಢೀಕರಿಸಿ ಬೇರೆ ಯೋಜನೆಗಳಲ್ಲಿ ಅದರಲ್ಲಿಯೂ ಮಾರ್ಚ್ ಒಳಗಡೆಯಲ್ಲಿಯೇ ಖರ್ಚಾಗುವಂತೆ ವ್ಯವಸ್ಥೆಯನ್ನು ಮಾಡುತ್ತೇವೆಂದು ಸುಮಾರು 108.93 ಕೋಟಿ ರೂಪಾಯಿ ಹಣವನ್ನು ವಾಪಸ್ಸು ಪಡೆದರು. ವಾಪಸ್ಸು ಪಡೆಯುವಂತಹ

ಸಂದರ್ಭದಲ್ಲಿ ಸದನದಲ್ಲಿ ಸಮಗ್ರವಾಗಿ ಚರ್ಚೆಯಾಯಿತು. ನೀವು ಮಾಡುತ್ತಿರುವಂತಹ ಕೆಲಸ ಸರಿಯಾದುದು ಅಲ್ಲ. ಈಗಾಗಲೇ ಅದಕ್ಕೆ ಯೋಜನೆಗಳನ್ನು ತಯಾರು ಮಾಡಿದ್ದಾರೆ, ಆ ಯೋಜನೆಯು ಕಾರ್ಯಗತವಾಗುವಂತಹ ಸಂದರ್ಭದಲ್ಲಿ ಏಕಾಏಕಿ 108.93 ಕೋಟಿ ರೂಪಾಯಿಗಳನ್ನು ವಾಪಸ್ಸು ಪಡೆಯಿತು ಎಂದರೆ ಆ ಯೋಜನೆಗಳು ಸ್ಥಗಿತ ಆಗುವುದರ ಜೊತೆಗೆ ಆ ಯೋಜನೆಗಳ ಫಲವನ್ನು ಪಡೆಯುವುದಕ್ಕೆ ಕಾಯ್ದುಕೊಂಡಿರುವಂತಹ ಫಲಾನುಭವಿಗಳಿಗೆ ಬಹಳ ಕಷ್ಟವಾಗುತ್ತದೆ, ಆದುದರಿಂದ ದಯವಿಟ್ಟು ಈ ಸಾಲಿನಲ್ಲಿ ಆ ಕೆಲಸವನ್ನು ಮಾಡಬೇಡಿ ಎಂದು ಎಷ್ಟೇ ಒತ್ತಾಯವನ್ನು ಮಾಡಿದರು ಕೂಡ ಸರ್ಕಾರ ಇಲ್ಲ ನಾವು ಮಾಡಿಯೇ ಮಾಡುತ್ತೇವೆ, ಮಾರ್ಚ್ ಒಳಗಡೆ ಆ ಹಣವನ್ನು ಖರ್ಚು ಮಾಡಿಯೇ ಮಾಡುತ್ತೇವೆಂದು ಹೇಳಿದರು, ಆದರೆ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ ಆ 108.93 ಕೋಟಿ ಹಣ ಆ ವರ್ಷದಲ್ಲಿಯೇ ಖರ್ಚು ಮಾಡುತ್ತೇವೆಂದು ಹೇಳಿ ಒಪ್ಪಿಸದಂತಹ ಸಮಾಜ ಕಲ್ಯಾಣ ಮಂತ್ರಿಗಳು ಶೇಕಡ 50 ಭಾಗದಷ್ಟು ಅಂದರೆ 50 ಕೋಟಿ ರೂಪಾಯಿ ಹಣವನ್ನು ಕೂಡ 1996-97ನೇ ಸಾಲಿನಲ್ಲಿ ಖರ್ಚು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ ಈ ಸದನದಲ್ಲಿ ಆ ವರ್ಷದಲ್ಲಿ ಖರ್ಚು ಮಾಡುತ್ತೇವೆಂದು ಹೇಳಿದಂತಹ ಮಂತ್ರಿಗಳು ಅವರು ಯಾವ ಕಾರ್ಯ ಯೋಜನೆಯನ್ನು ಹಾಕಿಕೊಂಡಿದ್ದರೋ ಆ ಕಾರ್ಯಯೋಜನೆಯಲ್ಲಿಯೂ ಸಹ ವಿಫಲರಾಗಿದ್ದಾರೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಯಾವ ಯೋಜನೆಯನ್ನು ಹಾಕಿಕೊಂಡು ಹಣವನ್ನು ಕ್ರೋಢೀಕರಿಸಿದರೋ ಆ ಯೋಜನೆಗಳು ಕಾರ್ಯಗತ ವಾಗುವುದಕ್ಕೆ ನಿಮ್ಮ ಅಧಿಕಾರಗಳ ಒತ್ತಾಸೆ ಇರಲಿಲ್ವಾ? ಅಧಿಕಾರಿಗಳಿಂದ ಹಣವನ್ನು ಖರ್ಚು ಮಾಡುವಂತಹ ವ್ಯವಸ್ಥೆಯನ್ನು ಏಕೆ ಮಾಡಲಿಲ್ಲ ಎನ್ನುವಂತಹ ವಿಚಾರವನ್ನು ತಾವು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಮತ್ತೊಂದು ವಿಚಾರವೆಂದರೆ, ಎಸ್‌ಸಿಪಿ ಹಣದಲ್ಲಿ ಸುಮಾರು 13.78 ಕೋಟಿ ರೂಪಾಯಿ ಹಣವನ್ನು ಕೊಳಚೆ ನಿರ್ಮೂಲನ ಮಂಡಳಿಗೆ ನೀವು ಕೊಟ್ಟಿರುತ್ತೀರಾ, ಕೊಳಚೆ ನಿರ್ಮೂಲನ ಮಂಡಳಿಗೆ ಕೊಡುವುದು ಬೇಡ, ಅದಕ್ಕೆ ಬೇರೆಯ ಕಡೆಯಿಂದ ಹಣ ಬರುತ್ತದೆ ದಯವಿಟ್ಟು ಇದು ಹೊಸ ಯೋಜನೆ ಅಲ್ಲವೆಂದು ಎಷ್ಟೇ ಹೇಳಿದರೂ ಕೂಡ ಸರ್ಕಾರಕ್ಕೆ ನಾವು ಮಾಡಿದಂತಹ ಒತ್ತಾಯದಿಂದ ಯಾವುದೇ ಫಲಪ್ರದ ಪ್ರತಿಕ್ರಿಯೆ ಬರದೇ ಆ ಹಣವನ್ನು ಅವರಿಗೆ ತಲುಪಿಸಿದರು. ಆದರೆ ಆ ಹಣವನ್ನು ಯಾವ ರೀತಿಯಲ್ಲಿ ಖರ್ಚು ಮಾಡಿದ್ದಾರೆ ಎನ್ನುವಂತಹ ಅವಲೋಕನವನ್ನು ತಿಳಿಸುವುದಕ್ಕೆ ನಾನು ಬಯಸುತ್ತಿದ್ದೇನೆ. ಮನೆಯನ್ನು ಪೂರ್ಣ ಮಾಡುವುದಕ್ಕೆ ಆರೂವರೆ ಕೋಟಿ ರೂಪಾಯಿಗಳು. ಅಂದರೆ ಕೊಳಚೆ ನಿರ್ಮೂಲನ ಮಂಡಳಿಯವರು ಯಾವುದೋ ಒಂದು ಸಂದರ್ಭದಲ್ಲಿ ಕಟ್ಟಿರತಕ್ಕಂತಹ ಮನೆಗಳನ್ನು ಪೂರ್ಣ ಮಾಡುವುದಕ್ಕೆ ಎಸ್‌ಸಿಪಿಯಲ್ಲಿದ್ದಂತಹ ಆರೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದನ್ನು ತೀವ್ರವಾಗಿ, ಗಂಭೀರವಾಗಿ ಪರಿಶೀಲನೆಯನ್ನು ಮಾಡಬೇಕಾಗಿದೆ. ಪರಿಶಿಷ್ಟ ಜಾತಿಯ ಕಾಲೋನಿಗಳಲ್ಲಿ ರಸ್ತೆಯನ್ನು, ಕುಡಿಯುವ ನೀರನ್ನು ಒದಗಿಸುವುದಕ್ಕೆ ಇಟ್ಟಿದ್ದಂತಹ ಹಣವನ್ನು ನಾವು ವಾಪಸ್ಸು ಪಡೆದಿದ್ದೇವೆ. ಅವರ ಮನೆಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವ ಸಲುವಾಗಿ ಇಟ್ಟಿದ್ದಂತಹ ಹಣವನ್ನು ನಾವು ವಾಪಸ್ಸು ಪಡೆದಿದ್ದೇವೆ. ಕೊಳಚೆ ನಿರ್ಮೂಲನಾ ಮಂಡಳಿಯವರು

ಯಾವುದೋ ಹಿಂದೆ ಯೋಜನೆಯನ್ನು ಮಾಡಿ ಅಪೂರ್ಣವಾಗಿ ಮಾಡಿದಂತಹ ಮನೆಗಳನ್ನು ಪೂರ್ಣ ಮಾಡುವುದಕ್ಕೆ ಖರ್ಚು ಮಾಡಿದ್ದಾರೆಂದರೆ ಇದು ದುರ್ಬಳಕೆಯಾಗುವುದಿಲ್ಲವೇ? ಇದು ಪರಿಶಿಷ್ಟ ಜನಾಂಗದವರಿಗೆ ಅನ್ಯಾಯವಾದಂತೆ ಆಗುವುದಿಲ್ಲವೇ? ನಾವು ಇದನ್ನು ಯೋಚನೆ ಮಾಡಬೇಕಾಗಿದೆ ಈ ರೀತಿಯಾಗುವುದಕ್ಕೆ ಯಾರು ಕಾರಣಕರ್ತರು ಎನ್ನುವುದನ್ನು ಸರ್ಕಾರ ಉತ್ತರ ನೀಡುವಂತಹ ಸಂದರ್ಭದಲ್ಲಿ ನೀಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಹೊಸ ಮನೆಗಳನ್ನು ನಿರ್ಮಾಣ ಮಾಡುವುದಕ್ಕಾಗಿ 4.45 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವುದಾಗಿ ತಿಳಿಸಿದ್ದಾರೆ. ನೀವು 4.45 ಕೋಟಿ ರೂಪಾಯಿಗಳನ್ನು ಆ ವೆಚ್ಚ ಮಾಡಿ ಎಲ್ಲೆಲ್ಲಿ ಹೊಸ ಮನೆಗಳನ್ನು ನಿರ್ಮಾಣ ಮಾಡುತ್ತಿದ್ದೀರಿ? ಈ ಹಣ ಪರಿಶಿಷ್ಟರಿಗಾಗಿ ಮೀಸಲಾಗಿಟ್ಟ ಹಣ ಪರಿಶಿಷ್ಟರ ಸಲುವಾಗಿಯೇ ಹೋಗಬೇಕಾಗಿದೆ ಎಂದರೆ 4.45 ಕೋಟಿ ರೂಪಾಯಿಗಳಿಗೆ ಎಷ್ಟು ಫಲಾನುಭವಿಗಳನ್ನು ಪರಿಶಿಷ್ಟರ ಪಟ್ಟಿಯಲ್ಲಿ ಮಾಡಿದ್ದೀರಾ ಎಷ್ಟು ಪರಿಶಿಷ್ಟ ಜನರಿಗೆ ಅನುಕೂಲವಾಗತ್ತದೆ ಎನ್ನುವಂತಹ ಉತ್ತರವನ್ನು ಇದುವರೆಗೂ ಕೂಡ ಸರ್ಕಾರವನ್ನು ಕೇಳುತ್ತಿದ್ದೇವೆ, ಆದರೆ ಸರ್ಕಾರದಿಂದ ಇದರ ಬಗ್ಗೆ ಸಮರ್ಪಕ ವಾದಂತಹ ಉತ್ತರ ಬಂದಿಲ್ಲ. ಇದಕ್ಕೂ ಕೂಡ ಸರ್ಕಾರದಿಂದ ಸಮರ್ಪಕವಾದಂತಹ ಉತ್ತರವನ್ನು ಕೇಳುತಿದ್ದೇನೆ. ಇನ್ನು ಮೂಲಭೂತ ಸೌಕರ್ಯಕ್ಕಾಗಿ 2.83 ಕೋಟಿ ರೂಪಾಯಿಗಳನ್ನು ಕೊಳಚೆ ನಿರ್ಮೂಲನ ಮಂಡಳಿಯಲ್ಲಿ ಖರ್ಚು ಮಾಡುವುದಕ್ಕೆ ತೀರ್ಮಾನವನ್ನು ಮಾಡಿದ್ದಾರೆ ಇದರಲ್ಲಿ ಒಂದು ನೋವಿನ ಸಂಗತಿ ಇದೆ ಅದನ್ನು ಇಲ್ಲಿ ಹೇಳಬೇಕಾಗಿದೆ. ಪರಿಶಿಷ್ಟ ಜನಾಂಗದವರು ವಾಸವಾಗಿರುವಂತಹ ಪರಿಶಿಷ್ಟ ಕಾಲೋನಿಯಲ್ಲಿ ಮಾಡಬೇಕಾದಂತಹ ಮೂಲಭೂತ ಸೌಕರ್ಯಗಳನ್ನು ಕೊಳಚೆ ನಿರ್ಮೂಲನ ಮಂಡಳಿಯಲ್ಲಿ ಏಕೆ ಮಾಡುತ್ತಿದ್ದೀರಾ? ಅಲ್ಲಿ ನಿಮಗೆ ಮಾಡುವುದಕ್ಕೆ ಹಣ ಇಲ್ವಾ? ಕೊಳಚೆ ನಿರ್ಮೂಲನ ಮಂಡಳಿಯಲ್ಲಿ ಎಲ್ಲಾ ಜನಾಂಗದ ಬಡವರು ಇರುತ್ತಾರೆ. ಆದರೆ, ಅವರ ಸಲುವಾಗಿ ಬೇರೆ ಯೋಜನೆಯ ಮೂಲಕ ಸರ್ಕಾರದಿಂದ ಹಣವನ್ನು ಒದಗಿಸಿದೆ. ಆದರೆ ಪರಿಶಿಷ್ಟ ಜನಾಂಗಕ್ಕೆ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಇಟ್ಟಿರುವಂತಹ ಹಣವನ್ನು ತೆಗೆದುಕೊಂಡು ಮೂಲಭೂತವಾದಂತಹ ಸೌಕರ್ಯಕ್ಕಾಗಿ ಉಪಯೋಗಿಸುತ್ತೇವೆಂದರೆ ನಿಜವಾಗಿಯೂ ಆ ಜನಾಂಗಕ್ಕೆ ಒಳ್ಳೆಯದನ್ನು ಮಾಡುವುದಕ್ಕೆ ಹೊರಟಿದ್ದೀರಾ? ಆ ಜನಾಂಗದ ಜನ ಯಾವ ರೀತಿಯಲ್ಲಿ ದುರುಪಯೋಗವಾಗುತ್ತದೆ ಎನ್ನುವುದಕ್ಕೆ ಇದಕ್ಕಿಂತಲೂ ದುಷ್ಟಾಂತ ಬೇಕಾ? ಇದಕ್ಕೆ ಉತ್ತರವನ್ನು ನೀಡುವಂತಹ ಸಂದರ್ಭದಲ್ಲಿ ನಾನು ಕೇಳಿರತಕ್ಕಂತಹ ಪ್ರಶ್ನೆಗಳಿಗೆ ಉತ್ತರವನ್ನು ನೀಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನು ನಾನು ಸರ್ಕಾರಕ್ಕೆ ಸಲಹೆಯನ್ನು ಕೊಡುವುದಕ್ಕೆ ಈ ಸಂದರ್ಭದಲ್ಲಿ ಬಯಸುತ್ತೇನೆ. ವಿಶೇಷ ಘಟಕ ಯೋಜನೆಯಡಿಯಲ್ಲಿರುವಂಥ ಹೆಚ್‌ಕೆಡಿಬಿಯಲ್ಲಿಯೇ ಆಗಲಿ ಅಥವಾ ಎಂಎಡಿಬಿಯಲ್ಲಿ ಆಗಲಿ. ಅಥವಾ ಬಿಎಡಿಬಿಯಲ್ಲಿಯೇ ಆಗಲಿ ಅಥವಾ ಕಾಡಾದಲ್ಲಿಯೇ ಆಗಲಿ ದಯವಿಟ್ಟು ಹಣವನ್ನು ವಾಪಸ್ಸು ಪಡೆಯಬೇಡಿ. ನೀವು ಏನಾದರೂ ಆ ಜನಾಂಗದ ಕಾಲೋನಿಗಳಿಗೆ, ಆ ಜನಾಂಗದಲ್ಲಿರುವಂಥ ವಾಡೆಗಳಿಗೆ ರಸ್ತೆಗಳೇನಾದರೂ ಹೋಗಬೇಕಂದರೆ ಸಾಕಷ್ಟು ಕೆಲಸಗಳು ನಡೆಯುತ್ತಿತ್ತು. ಈ ಹಣವನ್ನು ನೀವು ವಾಪಸ್ ಪಡೆದು ಜಿಲ್ಲಾ ಪಂಚಾಯತಿಯವರು ಮಾಡುತ್ತಾರೆ ಎನ್ನುವ ಹೇಳಿಕೆಯನ್ನು ನೀವು ಕೊಟ್ಟಿದ್ದೀರಿ. ಜಿಲ್ಲಾ ಪಂಚಾಯತಿಯವರು ನಿಜವಾಗಿಯೂ

ಮಾಡುವುದಿಲ್ಲ. ಇವತ್ತು ಸಮಗ್ರವಾಗಿ ಎಲ್ಲಾ ಜನಾಂಗದವರ ಅಭಿವೃದ್ಧಿಗಾಗಿ ಜಿಲ್ಲಾ ಪಂಚಾಯತಿಯವರು ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ. ಆದರೆ ಈ ಜನಾಂಗದವರ ಬಗ್ಗೆ ವಿಶೇಷವಾದ ಕಾಳಜಿಯನ್ನು ಅವರೇನಾದರೂ ತೋರಿಸಲಿಕ್ಕೆ ಹೋದರೆ ಈ ಜನಾಂಗದವರ ಸಲುವಾಗಿ ಇಟ್ಟಿದಂಥ ಹಣವನ್ನು ಏನಾದರೂ ಡೈವರ್ಟ್ ಮಾಡಲಿಕ್ಕೆ ಹೋದರೆ ಆ ಜನಾಂಗದಿಂದ ಪ್ರತಿರೋಧ ಬರುತ್ತದೆ. ದಯವಿಟ್ಟು ಆ ಕೆಲಸವನ್ನು ಮಾಡಬೇಡಿ. ಇನ್ನು ಮುಂದೆ ಈ ಒಂದು ಎಚ್.ಕೆ.ಡಿ.ಬಿ. ನಲ್ಲಾಗಲೀ ಎಂ.ಎ.ಡಿ.ಬಿ. ನಲ್ಲಾಗಲೀ ಬಿ.ಎ.ಡಿ.ಬಿ. ಅಥವಾ ಕಾಡಾದಲ್ಲೇ ಆಗಲೀ ಯಾವ ವಿಶೇಷ ಘಟಕ ಯೋಜನೆ ಇದೆಯೋ ಆ ಹಣವನ್ನು ಅವರ ಸಲುವಾಗಿ ಮೀಸಲಿಡಿ. ಮತ್ತೆ ಆ ಯೋಜನೆ ಕಾರ್ಯಗತವಾಗುವಂತೆ ಒಂದು ಕೆಲಸವನ್ನು ತಾವು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ನಾನು ಒತ್ತಾಯ ಮಾಡುತ್ತಿದ್ದೇನೆ. 1995-96ನೇ ಸಾಲಿನಲ್ಲಿ ಈ ಪಶುಸಂಗೋಪನಾ ಇಲಾಖೆಯಲ್ಲಿ ಸುಮಾರು 80 ಲಕ್ಷ ರೂಪಾಯಿ ಹಣವನ್ನು ಒದಗಿಸಿದ್ದೀರಿ. ಈ 80 ಲಕ್ಷ ರೂಪಾಯಿ ಹಣದಲ್ಲಿ ಸುಮಾರು 75 ಲಕ್ಷ ರೂಪಾಯಿ ಹಣವನ್ನು ವಾಪಸ್ ಪಡೆದಿದ್ದಾರೆ ಅಧ್ಯಕ್ಷರೆ. ಅಂದರೆ, ಕೇವಲ 5 ಲಕ್ಷ ರೂಪಾಯಿ ಹಣವನ್ನು ಖರ್ಚು ಮಾಡುವುಕ್ಕೋಸ್ಕರ ನೀವು 80 ಲಕ್ಷ ರೂಪಾಯಿ ಹಣವನ್ನು ಏತಕ್ಕೆ ಮಂಜೂರು ಮಾಡಬೇಕಾಗಿತ್ತು? ನಿಮ್ಮ ಕೈಯಲ್ಲಿ ಖರ್ಚು ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಅಂದರೆ ನೇರವಾಗಿ ನೀವು ಹೇಳಬಹುದಾಗಿತ್ತು ಪರಿಶಿಷ್ಟ ಜಾತಿ ಜನಾಂಗದವರ ಸಲುವಾಗಿ ಪಶುಸಂಗೋಪನಾ ಇಲಾಖೆಯಲ್ಲಿ ನಾವು ಯಾವುದೇ ಹಣವನ್ನು ಒದಗಿಸುವುದಿಲ್ಲ ಎಂದು. ಒದಗಿಸಿಬಿಟ್ಟು ಈ ರೀತಿ ವಾಪಸ್ ಪಡೆದುಕೊಂಡು ಬೇರಯದಕ್ಕೆ ನೀವು ಡೈವರ್ಟ್ ಮಾಡಿತು ಅಂದರೆ ಆ ಜನಾಂಗದವರ ಉದ್ಧಾರ ಸಾಧ್ಯವೇ? ಆದರೆ ಒಂದು ಜನಾಂಗಕ್ಕೆ ಏನನ್ನಿಸುತ್ತದೆ ಏಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಲುವಾಗಿ ಪಶುಸಂಗೋಪನಾ ಇಲಾಖೆಯಲ್ಲಿ 80 ಲಕ್ಷ ರೂಪಾಯಿ ಒದಗಿಸಿದ್ದಾರೆ ಎಂದಾಗ ಒಂದು ರೀತಿ ಮನಸ್ಸಿಗೆ ಸಮಾಧಾನವಾಗುತ್ತದೆ. ಆದರೆ ಅದು ಕಾರ್ಯಗತವಾಗಿರುವ ವಿಚಾರವನ್ನು ಪರಿಶೀಲನೆ ಮಾಡಿದಾಗ ಎಷ್ಟು ದ್ರೋಹ ಮಾಡಿದ್ದಾರೆ, ಎಷ್ಟು ಮೋಸ ಮಾಡಿದ್ದಾರೆ ಎಂದು ಅವರಿಗೆ ನಿಮ್ಮ ಮೇಲೆ ಕೆಟ್ಟ ಅಭಿಪ್ರಾಯ ಬರುತ್ತದೆ. ಅಂಥ ಕೆಟ್ಟ ಅಭಿಪ್ರಾಯವನ್ನು ಪಡೆದುಕೊಳ್ಳುವುದಕ್ಕೆ ಮುಂಚೆ ತಾವು ಜಾಗೃತರಾಗಿ ತಮ್ಮ ರೀತಿನೀತಿಗಳಲ್ಲಿ ಬದಲಾವಣೆಯನ್ನು ತಂದುಕೊಳ್ಳಬೇಕು ಎಂದು ಅಧ್ಯಕ್ಷರ ಮೂಲಕ ಈ ಸರ್ಕಾರವನ್ನು ನಾನು ಕೇಳಿಕೊಳ್ಳುತ್ತಿದ್ದೇನೆ. ಅಧ್ಯಕ್ಷರೇ, ಗಂಗಾಕಲ್ಯಾಣ ಯೋಜನೆಗೋಸ್ಕರ ಎಸ್.ಸಿ.ಪಿ.ನಲ್ಲಿ ಇದ್ದಂಥ ಹಣವನ್ನು ಡೈವರ್ಟ್ ಮಾಡಿದ್ದಾರೆ. ಇವತ್ತು ನಾವು ಯೋಚನೆ ಮಾಡಬೇಕಾಗಿದೆ ಅಧ್ಯಕ್ಷರೆ, ಗಂಗಾಕಲ್ಯಾಣ ಯೋಜನೆ ಹೊಸ ಯೋಜನೆ ಏನಲ್ಲ, ಎಸ್.ಸಿ.ಪಿಯಿಂದ ಅದಕ್ಕಾಗಿ ಬೇಕಾದಷ್ಟು ಹಣವನ್ನು ಇಟ್ಟಿದ್ದಾರೆ. ಆದರೆ ಎಸ್.ಸಿ.ಪಿ.ಯಿಂದ ನೀವು ಡೈವರ್ಟ್ ಮಾಡುವಂಥ ಕೆಲಸವನ್ನು ತಾವು ಏತಕ್ಕೆ ಮಾಡಿದಿರಿ? ಇದರಿಂದ ನಿಜವಾಗಿ ಅವರಿಗೆ ಪ್ರಯೋಜನ ಆಗುವುದಿಲ್ಲ. ದಯವಿಟ್ಟು ಇದಕ್ಕೆ ಹಿಂದೆ ಇದ್ದಂಥ ಉಪಯುಕ್ತ ಯೋಜನೆಗಳು ಏನೇನಿದೆ ಆ ಯೋಜನೆಗಳಲ್ಲಿ ಹಣವನ್ನು ತೊಡಗಿಸುವಂಥ ಕೆಲಸವನ್ನು ಮಾಡಿ ಈ ಗಂಗಾ ಕಲ್ಯಾಣ ಯೋಜನೆಗೆ ಏನು ಹಣವನ್ನು ತಾವು ತೊಡಗಿಸಿದ್ದೀರಿ ಅದನ್ನು ವಾಪಸ್ ಮರಳಿ ಅವರಿಗೆ ಕೊಡುವಂಥ ಕೆಲಸವನ್ನು ತಾವು ಮಾಡಬೇಕೆಂದು ತಮ್ಮ ಮೂಲಕ ಈ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಅಧ್ಯಕ್ಷರೆ, ಈ ಎಸ್.ಸಿ.ಪಿ.

ಹಣ ಒಂದು ರೀತಿಯಲ್ಲಿ ಅವ್ಯವಹಾರದಲ್ಲಿ ಕೂಡ ಭಾಗಿಯಾಗುವುದಕ್ಕೆ ಅನುಕೂಲ ಮಾಡಿಕೊಟ್ಟಿದೆ ಎಂಬ ಬಗ್ಗೆ ಒಂದು ಉದಾಹರಣೆಯನ್ನು ಈ ಸದನಕ್ಕೆ ನಾನು ಕೊಡುತ್ತಾ ಇದ್ದೇನೆ. ಮಂಡ್ಯದಲ್ಲಿ ಸುಮಾರು 230 ಮನೆಗಳನ್ನು ಕಟ್ಟುತ್ತಿದ್ದಾರೆ. ಈ 230 ಮನೆಗಳನ್ನು ಎಸ್.ಸಿ.ಪಿ. ನೀಡಿದ ಹಣದಿಂದ ಕಟ್ಟುತ್ತಿದ್ದಾರೆ. ಆದರೆ ಎಸ್.ಸಿ.ಪಿ. ಹಣ ಬಿಡುಗಡೆಯಾಗಿದ್ದು ಮಾರ್ಚಿಯಲ್ಲಿ. ಈ ಮನೆಗಳ ಕಟ್ಟಡ ನಿರ್ಮಾಣ ಪ್ರಾರಂಭವಾಗಿದ್ದು ಮಾರ್ಚಿಗಿಂತ ಪೂರ್ವದಲ್ಲಿ. ಅಂದರೆ ಇದರಲ್ಲಿ ನಾವು ಯೋಚನೆ ಮಾಡಬೇಕಾಗಿದ್ದು ಮಂಡ್ಯದಲ್ಲಿ 230 ಮನೆಗಳನ್ನು ಕಟ್ಟುವಂಥ ಸಂದರ್ಭದಲ್ಲಿ ಆ ಯೋಜನೆಗೆ ಯಾರು ಅವಕಾಶ ಕೊಟ್ಟರು? ಆ ಯೋಜನೆಯಿಂದ ಎಷ್ಟು ಜನ ಪರಿಶಿಷ್ಟ ಜಾತಿಯವರಿಗೆ ಅನುಕೂಲವಾಗುತ್ತದೆ? ಏಕೆಂದರೆ ಎಸ್.ಸಿ.ಪಿ. ಹಣ ಪರಿಶಿಷ್ಟರಿಗೇ ಹೋಗಬೇಕು. ಆದರೆ ಈ 230 ಮನೆಗಳನ್ನು ಎಂದೋ ಪ್ರಾರಂಭ ಮಾಡಿ ಇವತ್ತು ಎಸ್.ಸಿ.ಪಿ.ಯಿಂದ ಬಂದಂಥ ಹಣದಲ್ಲಿ ಸುಮಾರು 1 ಕೋಟಿ ರೂಪಾಯಿ ವ್ಯವಹಾರ ಅಧ್ಯಕ್ಷರೆ, ಈ 1 ಕೋಟಿ ಹಣವನ್ನು ವೆಚ್ಚ ಮಾಡಿ ಈ ಕಾಮಗಾರಿಯನ್ನು ಯಾವುದೇ ಟೆಂಡರ್‌ಗೆ ಕೊಟ್ಟಿಲ್ಲ.

ಅಧ್ಯಕ್ಷರು : ಇನ್ನು 5 ನಿಮಿಷ ಮಾತನಾಡಿ. ತಮಗೆ 20 ನಿಮಿಷ ಎಂದು ಹೇಳಿದ್ದೆ. ತಾವು 25 ನಿಮಿಷ ಮಾತನಾಡಿದ್ದೀರಿ. ಇನ್ನು 5 ನಿಮಿಷ ಕೊಡುತ್ತೇನೆ.

ಶ್ರೀ ಹೆಚ್. ಡಿ. ಬಸವರಾಜ್ : ಈ ಯೋಜನೆಗಳಿಗೆ ಕೊಟ್ಟಂಥ ಹಣವನ್ನು, ಈ ಯೋಜನೆಗೆ ಯಾವ ರೀತಿ ಹಣ ಬರುತ್ತದೆ ಎಂಬುದನ್ನು ತಿಳಿದುಕೊಳ್ಳದೆ ನೀವು 230 ಮನೆಗಳನ್ನು ಪ್ರಾರಂಭ ಮಾಡಿದ್ದೀರಿ. ಹೇಗೆ ಇದನ್ನು ಪ್ರಾರಂಭ ಮಾಡಿದಿರಿ? ಇದಕ್ಕೆ ಅನುಮೋದನೆ ಕೊಟ್ಟವರು ಯಾರು? ಇದರ ಬಗ್ಗೆ ಸದನ ಸಮಿತಿಯ ಒಂದು ನೇಮಕ ಆಗಬೇಕಾಗಿದೆ ಅಧ್ಯಕ್ಷರೆ. ಇದರಲ್ಲಿ ಬಹಳಷ್ಟು ಅವ್ಯವಹಾರ ಆಗಿದೆ.230 ಮನೆಗಳ ನಿರ್ಮಾಣವನ್ನು ಕೇವಲ ಮಂಡ್ಯದಲ್ಲಿ ಮಾಡಿದ್ದೀರಿ. ಮಂಡ್ಯದಲ್ಲಿ ಕಟ್ಟುವಂಥ ಪ್ರಮೇಯ ಏನಿತ್ತು? ಇದಕ್ಕೆ ಯಾವುದಾದರೂ ಒಂದು ತಯಾರಿ ಮಾಡಿದ್ದೀರಾ? ಈ ಹಣ ನಿಮಗೆ ಕೊಡುತ್ತಾರೆ ಎನ್ನುವ ಗಮನವನ್ನು ನೀವು ಎಲ್ಲಿ ಪಡೆದಿದ್ದೀರಿ? ಆದ್ದರಿಂದ, ಇದಕ್ಕೆ ಒಂದು ಸದನ ಸಮಿತಿಯ ಒಂದು ತನಿಖೆ ಅಗತ್ಯ ಎಂದು ನಾನು ಈ ಸಮಯದಲ್ಲಿ ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಇದು ತೀಕ್ಷ್ಣವಾದಂಥ, ಗಂಭೀರವಾದಂಥ ಒಂದು ಆರೋಪ. ಈ ಆರೋಪವನ್ನು ಸರ್ಕಾರ ಗಂಭೀರವಾಗಿ ಪರಿಗಣನೆ ಮಾಡಿ ಇದಕ್ಕೆ ಸದನ ಸಮಿತಿಯನ್ನು ನೇಮಕ ಮಾಡುವುದರ ಜೊತೆಗೆ ಸತ್ಯವನ್ನು ಈ ಸದನಕ್ಕೆ ತಿಳಿಸಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಅಧ್ಯಕ್ಷರೆ, ಪುರಸಭೆ, ನಗರಸಭೆ ಮತ್ತು ಮಹಾ ನಗರಪಾಲಿಕೆಗಳಲ್ಲಿ ಸರ್ಕಾರಿ ಆದೇಶದ ಪ್ರಕಾರ ಶೇಕಡ 18ರಷ್ಟು ಹಣವನ್ನು ಅವರು ವೆಚ್ಚಮಾಡಬೇಕು. ಈ ರೀತಿ ಸರ್ಕಾರಿ ಸುತ್ತೋಲೆಗಳನ್ನು ಕಳುಹಿಸಿದ್ದೀರಿ. ಆದರೆ, ಯಾವ ನಗರಸಭೆಗಳಲ್ಲೇ ಆಗಲಿ ಮಹಾನಗರ ಪಾಲಿಕೆಗಳಲ್ಲಾಗಲೀ ಆ ಹಣ ವೆಚ್ಚವಾಗುತ್ತಿಲ್ಲ. ಸುಮಾರು 20 ನಗರಸಭೆಗಳಲ್ಲಿ 95-96ನೇ ಸಾಲಿನವರೆಗೆ ಎಷ್ಟು ಹಣ ವೆಚ್ಚವಾಗಿದೆ, ಈ ಜನಾಂಗದವರಿಗೆ ವೆಚ್ಚ ಆಗಬೇಕಾದಂಥ ಹಣ ಎಷ್ಟು ವೆಚ್ಚವಾಗದೇ ಉಳಿದಿದೆ ಎನ್ನುವ ಬಗ್ಗೆ ಅಂಕಿಅಂಶವನ್ನು ತಮಗೆ ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. 66,92,787 ರೂಪಾಯಿ ಹಣ ಇವರ ಸಲುವಾಗಿ ವೆಚ್ಚವಾಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಮಾತನಾಡುವಾಗ ಸಂಬಂಧಪಟ್ಟ ಮಂತ್ರಿಗಳೇ ಇಲ್ಲ.

ಅಧ್ಯಕ್ಷರು : ಅವರು ಚಿಂತಾಮಣಿಗೆ ನನ್ನ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ. ಚಿಂತಾಮಣಿಯಲ್ಲಿ ಗಲಭೆಯಾಗಿದೆಯಲ್ಲ. ಅಲ್ಲಿಗೆ ನನ್ನ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ. ಅದಕ್ಕೆ ಬ್ಯಾಕ್‌ವರ್ಡ್ ಕ್ಲಾಸ್ ಇಲಾಖೆ ಮಂತ್ರಿಗಳು ಇಲ್ಲೇ ಇದ್ದಾರೆ. ನಾನು ಅವರಿಗೆ ಪರ್ಮಿಷನ್ ಕೊಟ್ಟಿದ್ದೇನೆ ಹೋಗಿಬನ್ನಿ ಎಂದು. ಮಾನ್ಯ ಜಯಚಂದ್ರ ಅವರು, ತಾವು ಮಾತನಾಡಿದ್ದೆಲ್ಲಾ ಪ್ರೊಸೀಡಿಂಗ್ಸ್ ತೆಗೆಸಿ ನಾನೇ ನಮ್ಮ ಆಫೀಸ್ ಕಡೆಯಿಂದ ಪ್ರೆಸ್‌ಗಳಿಗೆ ಕಳುಹಿಸಿಕೊಡುತ್ತೇನೆ. ಈಗ ಇಲ್ಲಿ ಪ್ರೆಸ್‌ನವರು ಯಾರೂ ಇಲ್ಲ ಆದ್ದರಿಂದ. ಯಾರು ಲೇಟಾಗಿ ನಮ್ಮ ಮೆಂಬರ್ಸ್ ಮಾತನಾಡಿದ್ದಾರೆ ಅವರ ಪ್ರೊಸೀಡಿಂಗ್ಸನ್ನು ಪ್ರೆಸ್‌ಗಳಿಗೆ ಕಳುಹಿಸಿಕೊಡುವುದಕ್ಕೆ ನಮ್ಮ ಆಫೀಸಿನಿಂದ ನಾನು ಎಲ್ಲಾ ಏರ್ಪಾಡು ಮಾಡುತ್ತೇನೆ.

ಶ್ರೀ ಹೆಚ್. ಡಿ. ಬಸವರಾಜ್ : ಅಧ್ಯಕ್ಷರೆ, 20 ನಗರಸಭೆಗಳಲ್ಲಿ 66,92,787 ರೂಪಾಯಿ ಹಣ ಈ 1996ನೇ ಸಾಲಿನವರೆಗೂ ಖರ್ಚು ಮಾಡಿಲ್ಲ. ಇದರ ಬಗ್ಗೆ ಸರ್ಕಾರ ಸೂಕ್ತವಾದಂಥ ಕ್ರಮವನ್ನು ಈ 20 ನಗರಸಭೆಗಳ ಮೇಲೂ ತೆಗೆದುಕೊಳ್ಳಬೇಕು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಅದೇ ರೀತಿ ಆರು ಮಹಾನಗರ ಪಾಲಿಕೆಗಳಲ್ಲಿ 6,69,39,226 ರೂಪಾಯಿ ಹಣ ವೆಚ್ಚವಾಗಿಲ್ಲ. ಇವತ್ತು ಆ ಮಹಾನಗರಪಾಲಿಕೆಯಲ್ಲಿರುವ ಕಮೀಷನರ್‌ಗಳು ಯಾವರೀತಿ ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ತಾವು ಅವಲೋಕನ ಮಾಡಬೇಕಾಗಿದೆ. ಈ ಹಣವನ್ನು ಏತಕ್ಕಾಗಿ ಖರ್ಚು ಮಾಡಲಿಲ್ಲ ಎಂದು ಅವರ ಮೇಲೆ ತಾವು ಉಗ್ರವಾದ ಕ್ರಮವನ್ನು ತಾವೇನಾದರೂ ಕೈಗೊಂಡರೆ ಬಹುಶಃ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಬಹಳಷ್ಟು ಅಭಿನಂದನೆಯನ್ನು ಈ ಸರ್ಕಾರಕ್ಕೆ ಕೊಡುತ್ತಾರೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಈ ಸದನಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಡಾಕ್ಟರ್ ಅಂಬೇಡ್ಕರ್ ಜನ್ಮಶತಾಬ್ದಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ 1 ಲಕ್ಷ ಮನೆ ನಿರ್ಮಾಣಕ್ಕಾಗಿ ಮತ್ತು 25 ಸಾವಿರ ಮನೆಗಳನ್ನು ನಗರಪ್ರದೇಶದಲ್ಲಿ ನಿರ್ಮಾಣ ಮಾಡಲಿಕ್ಕೋಸ್ಕರ ಹೌಸಿಂಗ್ ಬೋರ್ಡಿನವರಿಗೆ 1991ರಲ್ಲಿ 15 ಕೋಟಿ ರೂಪಾಯಿ ಹಣವನ್ನು ಸಮಾಜ ಕಲ್ಯಾಣ ಇಲಾಖೆಯವರು ನೀಡಿದ್ದಾರೆ. ಇದುವರೆಗೂ ಕರ್ನಾಟಕ ಹೌಸಿಂಗ್ ಬೋರ್ಡಿನವರು ಮನೆಗಳ ನಿರ್ಮಾಣವನ್ನು ಕೂಡ ಮಾಡಿಲ್ಲ. ಆದರೆ ಹಣವನ್ನು ಕೂಡ ವಾಪಸ್ ಮಾಡಿಲ್ಲ. ಅಂದರೆ ಪರಿಶಿಷ್ಟರ ಹಣವನ್ನು ಯಾರು ಎಲ್ಲಿಗೆ ನೀಡಿದರೂ ಕೂಡ ಅದಕ್ಕೆ ಹೇಳುವವರು ಕೇಳುವವರು ಯಾರೂ ಇಲ್ಲ. ಈ ಅವ್ಯವಸ್ಥೆಯನ್ನು ವ್ಯವಸ್ಥೆಗೆ ತರುವಂಥ ಕೆಲಸವನ್ನು ಸರ್ಕಾರ ಮಾಡಬೇಕು. ಆ 15 ಕೋಟಿ ರೂಪಾಯಿ ಹಣವನ್ನು ವಾಪಸ್ ಪಡೆದು ಈ ಜನಾಂಗದವರ ಸಲುವಾಗಿ ಯಾವ ಮನೆಗಳನ್ನು ನಿರ್ಮಾಣ ಮಾಡಬೇಕು ಎಂದು ಇದ್ದಾರೋ ಅದನ್ನು ಈ ವರ್ಷವಾದರೂ ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತಿದ್ದೇನೆ, ಇವತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನಿವೇಶನರಹಿತರು

ಮತ್ತು ಮನೆ ಇಲ್ಲದೇ ಇರುವವರು ಸುಮಾರು 4 ಲಕ್ಷ ಜನ ಇದ್ದಾರೆ. ಈ ನಾಲ್ಕು ಲಕ್ಷ ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀವು ಯಾವರೀತಿ ಹಂಚಿಕೆ ಮಾಡಿದ್ದೀರಿ ಎನ್ನುವಂಥ ಅಂಕಿಅಂಶವನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛಿಪಡುತ್ತಿದ್ದೇನೆ. 1996-97ನೇ ಸಾಲಿನಲ್ಲಿ ನಿವೇಶನ ಹಂಚಿಕೆ ಗ್ರಾಮೀಣ ಪ್ರದೇಶದಲ್ಲಿ 25, 595 ಮಾಡುತ್ತೇವೆಂದು ಘೋಷಣೆ ಮಾಡಿದ್ದೀರಿ. ಆದರೆ ತಾವು ಘೋಷಣೆ ಮಾಡಿದಂಥ 25,595ರಲ್ಲಿ ತಾವು ನೀಡಿದ್ದು ಕೇವಲ 17,689. ಅದೇ ರೀತಿ ನಗರ ಪ್ರದೇಶದಲ್ಲಿ 11,724 ನ್ನು ನೀಡುವುದಾಗಿ ಘೋಷಣೆ ಮಾಡಿ ಕೇವಲ 1946ನ್ನು ನೀಡಿದ್ದೀರಿ. ಅಂದರೆ, ಈ ಅಂಕಿಅಂಶವನ್ನು ಏತಕ್ಕೆ ನಾನು ನೀಡುತ್ತಿದ್ದೇನೆ ಅಂದರೆ ಸರ್ಕಾರ ಎಷ್ಟು ವಿಫಲವಾಗಿದೆ, ಅವರ ಬಗ್ಗೆ ಇವರು ಯಾವರೀತಿ ಕಾಳಜಿಯನ್ನು ವಹಿಸಿದ್ದಾರೆ ಎನ್ನುವುದನ್ನು ತಿಳಿಸಲಿಕ್ಕೆ ನಾನು ಈ ಸಂದರ್ಭದಲ್ಲಿ ಈ ಪ್ರಸ್ತಾವನೆಯನ್ನು ಮಾಡುತ್ತಿದ್ದೇನೆ. ಅದೇರೀತಿ ಮನೆ ಹಂಚಿಕೆಯ ಒಂದು ವಿಚಾರವನ್ನು ಕೂಡ ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛಿಪಡುತ್ತಿದ್ದೇನೆ. 1996-97ನೇ ಸಾಲಿನಲ್ಲಿ ಸುಮಾರು 25,000 ಅಂಬೇಡ್ಕರ್ ಮನೆಗಳನ್ನು ನಾವು ಹಂಚಿದ್ದೇವೆ ಎಂದು ಸರ್ಕಾರ ಘೋಷಣೆ ಮಾಡಿತು. ಆದರೆ ಹಂಚಿಕೆ ಮಾಡಿದ್ದು ಎಷ್ಟು ಗೊತ್ತಾ ಅಧ್ಯಕ್ಷರೆ? ಬಹುಶಃ ತಾವು ಆಶ್ಚರ್ಯ ಪಡುತ್ತೀರಿ. ಒಂದೂ ಕೂಡ ಇಲ್ಲ. ಅದೇ ರೀತಿ ಆಶ್ರಯ ಮನೆಗಳಲ್ಲಿ 7,200 ಪರಿಶಿಷ್ಟ ಜಾತಿಯವರಿಗೆ ನೀವು ಹಂಚಿಕೆ ಮಾಡುತ್ತೇವೆ ಎಂದು ಹೇಳಿ ಕೇವಲ 771ನ್ನು ಮಾಡಿದ್ದೀರಿ. ಅಂದರೆ ಎಷ್ಟು ಪ್ರತಿಶತ ಆಯಿತು ಎಂದು ತಾವು ಯೋಚನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರದವರನ್ನು ಎಚ್ಚರಿಕೆ ಮಾಡಲಿಕ್ಕೆ ಇಚ್ಛಿಪಡುತ್ತಿದ್ದೇನೆ ಇಂದಿರಾ ಅವಾಸ್‌ನಲ್ಲಿ 53,180 ಮನೆಗಳನ್ನು ಇವರ ಸಲುವಾಗಿ ನಾವು ಕಟ್ಟುತ್ತೇವೆಂದು ಹೇಳಿದ್ದೀರಿ. ಆದರೆ ಒಂದು ಮನೆಯನ್ನೂ ಪೂರ್ಣ ಮಾಡಿಲ್ಲ. ಇವತ್ತು ನೀವು ಹೇಳಿಕೆ ಕೊಟ್ಟಿರುವುದು ಏನೆಂದರೆ 25,517 ಮನೆಗಳು ಕಟ್ಟುತ್ತಿರುವ ಹಂತದಲ್ಲಿದೆ ಅಂದರೆ ಕಾಮಗಾರಿಯಲ್ಲಿದೆ ಎಂದು ಹೇಳಿದ್ದೀರಿ. ಅಂದರೆ ಒಂದು ಮನೆಗಳೂ ಪೂರ್ಣ ಆಗಿಲ್ಲ. 1996-97ನೇ ಸಾಲಿನಲ್ಲಿ 25 ಸಾವಿರ ಮನೆಗಳಲ್ಲಿ ಒಂದು ಮನೆಯನ್ನೂ ಅಂಬೇಡ್ಕರ್ ಮನೆಯನ್ನು ಹಂಚಿಕೆ ಮಾಡಿಲ್ಲ. ಆಶ್ರಯದಲ್ಲಿ 7,200ರಲ್ಲಿ ಕೇವಲ 771, ಇಂದಿರಾ ಅವಾಸ್‌ನಲ್ಲಿ 53,180ರಲ್ಲಿ ಒಂದು ಮನೆಗಳೂ ಕೂಡ ಇಲ್ಲ.

9.30 ಪಿ.ಎಂ.

ಇನ್ನು ಈ ಸಂದರ್ಭಧಲ್ಲಿ ಎಜುಕೇಶನ್ ವಿಷಯದ ಬಗ್ಗೆ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ನಾನು ಇಷ್ಟೊಂದು ದಿವಸದಿಂದ ಪ್ರಿಪೇರ್ ಆಗಿ ಬಂದಿದ್ದೇನೆ. ತಾವು ಕೂಡ ಉದಾರವಾಗಿದ್ದೀರಿ ಆದಕಾರಣ ನನಗೆ ಇನ್ನೂ ಒಂದು ಐದು ನಿಮಿಷ ಅವಕಾಶವನ್ನು ಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು ಮಾತನಾಡಿ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿಯವರು, ಪರಿಶಿಷ್ಟ ಪಂಗಡದವರು ಸರ್ಕಾರದ ನ್ಯೂಸ್ ಕೇಳಲು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಲು ಸಮಾಜ ಕಲ್ಯಾಣ ಇಲಾಖೆಯಿಂದ ಒಂದೊಂದು ಕ್ಷೇತ್ರಕ್ಕೆ ಒಂದೊಂದು ಟಿ.ವಿ.ಯನ್ನು ಕೊಡುತ್ತಾರೆ. ಆದರೆ

ಒಂದೊಂದು ಕ್ಷೇತ್ರದಲ್ಲಿ 150ರಿಂದ 200 ಹಳ್ಳಿಗಳು ಬರುತ್ತವೆ. ಆ ರೀತಿ ಒಂದೊಂದು ಕ್ಷೇತ್ರಕ್ಕೆ ಒಂದೊಂದು ಕೊಟ್ಟುಕೊಂಡು ಹೋದರೆ 200 ವರ್ಷವಾಗುತ್ತದೆ. ಆದ್ದರಿಂದ ಅಲ್ಲಿಯ ಜನರಿಗೆ ಅನುಕೂಲವಾಗಲು ಕನಿಷ್ಟಪಕ್ಷ ಒಂದೊಂದು ಕ್ಷೇತ್ರಕ್ಕೆ ಒಂದು ವರ್ಷಕ್ಕೆ ಐದು ಟಿ.ವಿ. ಗಳನ್ನಾದರು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ಬಸವರಾಜು : ಇನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೆ ವಸತಿ ಶಾಲೆಗಳನ್ನು ತೆರೆದಿದ್ದೀರಿ. ಆದರೆ ಐದನೇ ತರಗತಿಯಿಂದ ಏಳನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಎಲ್ಲಿ ಹೋಗಬೇಕು? ಇದೊಂದು ಗಂಭೀರವಾದ ವಿಷಯ ಒಂದರಿಂದ ನಾಲ್ಕನೇ ತರಗತಿಯಲ್ಲಿರುವ ವಸತಿ ಶಾಲೆಗಳಲ್ಲಿ ತಾವು ಸಕಲ ಸೌಲಭ್ಯಗಳನ್ನು ಕೊಡುತ್ತಿದ್ದೀರಿ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ : ಅವರು ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೆ ಎಂದು ಹೇಳುತ್ತಿದ್ದಾರೆ, ಆದರೆ ಅದು ಐದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ. ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೆ ಮೊರಾರ್ಜಿ ದೇಸಾಯಿ ಶಾಲೆಗಳನ್ನು ಕೊಡುತ್ತಿದ್ದೇನೆ.

ಶ್ರೀ ಹೆಚ್. ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೆ ವಸತಿ ಶಾಲೆಯನ್ನು ತೆರೆದಿದ್ದೀರಿ. ಮಾನ್ಯ ಸಚಿವರು ಹೇಳಿರುವ ಹಾಗೆ ಮೊರಾರ್ಜಿ ದೇಸಾಯಿ ಶಾಲೆಗಳನ್ನು ಕೂಡ ತೆರೆದಿದ್ದಾರೆ. ಆದರೆ ಕೇವಲ 40 ಮೊರಾರ್ಜಿ ದೇಸಾಯಿ ಶಾಲೆಗಳನ್ನು ಮಾತ್ರ ತೆರೆದಿದ್ದಾರೆ. ನಾನು ಅದನ್ನೇ ಹೇಳುವುದಕ್ಕೆ ಹೊರಟಿದ್ದೆ. ಅಷ್ಟರಲ್ಲೇ ಸಚಿವರು ಹೇಳಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದ ಎಷ್ಟು ವಿದ್ಯಾರ್ಥಿಗಳನ್ನು ಆ 40 ವಸತಿ ಶಾಲೆಗಳಲ್ಲಿ ಅಕಾಮಡೇಟ್ ಮಾಡಬಹುದಾ? ಎಲ್ಲರಿಗೆ ಅದರಲ್ಲಿ ಅಕಾಮಡೇಟ್ ಮಾಡಲು ಸಾಧ್ಯವಿದೆಯಾ? ಅದು ಬಹಳ ಕಷ್ಟ, ಸಾಧ್ಯವಿಲ್ಲ. ಇನ್ನೊಂದು ಏನೆಂದರೆ ಈ 40 ಮೊರಾರ್ಜಿ ದೇಸಾಯಿ ಶಾಲೆಗಳನ್ನು ನೀವು ನಮ್ಮ 35 ಮೀಸಲಾತಿ ಕ್ಷೇತ್ರಗಳಲ್ಲಿ ತೆಗಿದಿಲ್ಲ. ಅವುಗಳನ್ನು ಯಾವುದೋ ಬೇರೆ ಬೇರೆ ತಾಲ್ಲೂಕುಗಳಲ್ಲಿ ತೆರೆದಿದ್ದೀರಿ. ಎಲ್ಲಿ ಜನಸಂಖ್ಯೆ ಜಾಸ್ತಿ ಇದೆ ಅಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಎಲ್ಲಿ ಜಾಸ್ತಿ ಇದೆ ಅಲ್ಲಿ ಆ ಮೊರಾರ್ಜಿ ದೇಸಾಯಿ ಶಾಲೆಗಳನ್ನು ತೆರೆಯಲಿಲ್ಲ. ಇದರಿಂದ ಏನೇನು ಅನಾನುಕೂಲತೆ ಆಗಿದೆ ಎಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಬಹಳಷ್ಟು ದೂರ ಪ್ರಯಾಣ ಮಾಡಬೇಕಾಗಿರುವುದರಿಂದ ತಮ್ಮ ಮಕ್ಕಳನ್ನು ಈ ವಸತಿ ಶಾಲೆಗಳಿಗೆ ಸೇರಿಸಬೇಕಾದರೆ ತೊಂದರೆಯಾಗಿದೆ. ಅವರು ಒಂದು ರೀತಿಯಲ್ಲಿ ವಿದ್ಯಾಭ್ಯಾಸವನ್ನು ನಿಲ್ಲಿಸುವಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಆದಕಾರಣ ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಯಾವುದೇ ಕಾರಣಕ್ಕಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆ ಇರುವಂಥ ಸ್ಥಳಗಳಲ್ಲಿ ಪ್ರಥಮ ಆದ್ಯತೆಯ ಮೇಲೆ ಈ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ತೆರೆಯಬೇಕು. ಅದರ ಜೊತೆಗೆ ನಾನು

ಕೇಳಿಕೊಳ್ಳುವುದೇನೆಂದರೆ ಮೊರಾರ್ಜಿ ದೇಶಾಯಿ ಶಾಲೆಗಳಿಗೆ ನೀಡುವಂಥ ಎಲ್ಲ ವ್ಯವಸ್ಥೆಯನ್ನು ವಸತಿ ಶಾಲೆಗಳಿಗೂ ಕೂಡ ಕೊಡಬೇಕು ಏಕೆಂದರೆ ಆ ಮಕ್ಕಳು ಒಂದೇ ಈ ಮಕ್ಕಳೂ ಒಂದೆ. ಮಕ್ಕಳು ಒಂದೇ ಎಂದಮೇಲೆ ಆ ಮಕ್ಕಳಿಗೆ ಉತ್ತಮವಾದ ಆಹಾರವನ್ನು ನೀಡುತ್ತಿದ್ದಾರೆ ಆದರೆ ಈ ಮಕ್ಕಳಿಗೆ ಉತ್ತಮವಾದ ಆಹಾರವನ್ನು ನೀಡುತ್ತಿಲ್ಲ. ಆದಕಾರಣ ಆ ವ್ಯತ್ಯಾಸವನ್ನು ನಿಲ್ಲಿಸಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರವನ್ನು ಹೇಳಿದರೆ ಬಹುಶಃ ತಾವು ಕೂಡ ಬಹಳಷ್ಟು ಆಶ್ಚರ್ಯಪಡುತ್ತೀರಿ, ಎಂದು ಕಾಣಿಸುತ್ತದೆ. ಬಹಳ ನೋವಿನಿಂದ ಹೇಳುತ್ತಿದ್ದೇನೆ ಇವೊತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಜೈಲಿನಲ್ಲಿರುವಂಥ ಒಬ್ಬ ಕೈದಿಗೆ ಏನು ಖರ್ಚು ಮಾಡುತ್ತಿದ್ದಾರೆ, ನಿರಾಶ್ರಿತರಾದ ಬೆಗ್ಗರ್ಸ್ ಕಾಲೋನಿಯಲ್ಲಿರುವ ಭಿಕ್ಷುಕರಿಗೆ ಎಷ್ಟು ದುಡ್ಡನ್ನು ಖರ್ಚು ಮಾಡುತ್ತಿದ್ದಾರೆ ಅಷ್ಟು ದುಡ್ಡು ಕೂಡ ಖರ್ಚು ಮಾಡುತ್ತಿಲ್ಲ. ಇವೊತ್ತು ದಿನವೊಂದಕ್ಕೆ ಕೈದಿಗಳಿಗೆ 56.25 ಪೈಸೆಯನ್ನು ಖರ್ಚು ಮಾಡುತ್ತಿದ್ದಾರೆ. ಭಿಕ್ಷುಕರಿಗೆ 15 ರೂಪಾಯಿಯನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೆ ಐದರಿಂದ ಹದಿಮೂರು ರೂಪಾಯಿಯವರೆಗೆ ಖರ್ಚು ಮಾಡುತ್ತಿದ್ದಾರೆ. ಆ ಒಂದು ವ್ಯವಸ್ಥೆಯನ್ನು ನಿಲ್ಲಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಏಕೆಂದರೆ ಕೈದಿಗಳಿಗೆ, ಭಿಕ್ಷುಕರಿಗೆ ನೋಡಿಕೊಳ್ಳುವುದಕ್ಕಿಂತಲೂ ಕೀಳಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳನ್ನು ನೋಡಿಕೊಳ್ಳುತ್ತಿದ್ದಾರೆ. ಇವೊತ್ತು ಹದಿಮೂರು ರೂಪಾಯಿನಲ್ಲಿ ಏನಾಗುತ್ತದೆ? ಸರ್ಕಾರಕ್ಕೆ ಒಂದು ವೇಳೆ ಆ ಮಕ್ಕಳ ಬಗ್ಗೆ ಕಳಕಳಿ ಇದ್ದರೆ ದಿನವೊಂದಕ್ಕೆ ಸುಮಾರು ಇಪ್ಪತ್ತೈದು ರೂಪಾಯಿಯನ್ನು ಖರ್ಚು ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಅಂಗನವಾಡಿಗಳಲ್ಲಿ ಪ್ರತಿವರ್ಷ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮಕ್ಕಳ ಸಲುವಾಗಿ ಸುಮಾರು ಏಳು ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ದುರಂತ ಏನೆಂದರೆ ಈ ಏಳು ಕೋಟಿ ರೂಪಾಯಿ ಹಣದಲ್ಲಿ ಈ ಮಕ್ಕಳಿಗೆ ಅಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೆ ಒಂದು ರೂಪಾಯಿನ ಎಕ್ಸಟ್ರಾ ಡಯಟ್ ಕೊಡಬೇಕು ಎಂದು ಇದೆ. ಆದರೆ ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯಾವ ಮಕ್ಕಳಿಗೂ ಕೂಡ ಎಕ್ಸ್‌ಟ್ರಾ ಡೈಯಟ್ ಸಿಗುತ್ತಿಲ್ಲ ಎನ್ನುವಂಥ ಸತ್ಯವನ್ನು ನಾನು ಹೇಳುತ್ತಿದ್ದೇನೆ. ಈ ಏಳು ಕೋಟಿ ಹಣ ಪೋಲಾಗುತ್ತಿದೆ. ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು, ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ವಿದ್ಯಾರ್ಥಿ ವೇತನದ ಬಗ್ಗೆ ಹೇಳಬೇಕಾದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಆದಾಯದ ಮಿತಿಯನ್ನು ಹಾಕಿದ್ದಾರೆ. ಆದರೆ ಅಲ್ಪಸಂಖ್ಯಾತರ ಮಕ್ಕಳಿಗೆ ಹಾಕಿಲ್ಲ. ಬ್ಯಾಕ್ವರ್ಡ್ ಕ್ಲಾಸ್‌ನಲ್ಲಿರುವ ಮಕ್ಕಳಿಗೆ ಹಾಕಿಲ್ಲ. ಈ ಒಂದು ಅನ್ಯಾಯ ಏಕೆ? ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ತಾವು ಏನು ಆದಾಯ ಮಿತಿಯನ್ನು ಮಾಡಿದ್ದೀರಿ ಅದನ್ನು ತೆಗೆದು ಹಾಕಬೇಕು, ಅಲ್ಪಸಂಖ್ಯಾತ ಮಕ್ಕಳಿಗೆ ಹೇಗೆ ನೀವು ನೋಡಿಕೊಳ್ಳುತ್ತಿದ್ದೀರಿ ಮತ್ತು ಬ್ಯಾಕ್ವರ್ಡ್ ಕ್ಲಾಸ್ ಮಕ್ಕಳಿಗೆ ನೀವು ಹೇಗೆ ನೋಡಿಕೊಳ್ಳುತ್ತಿದ್ದೀರಿ ಆ ಒಂದು ಪದ್ಧತಿಯನ್ನು ನೀವು ಇವರಿಗೂ ಕೂಡ ಎಕ್ಸ್‌ಟೆಂಡ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪರಿಕ್ಷಾ ಪೂರ್ವ ತರಬೇತಿ ಕೇಂದ್ರಗಳಲ್ಲಿ ಸುಮಾರು ಒಂದು ಕೋಟಿ ಇಪ್ಪತ್ಮೂರು ಲಕ್ಷ ಇಪ್ಪತ್ತೈದು ಸಾವಿರದ ಒಂಭೈನೂರ ಎಪ್ಪತ್ತೆರಡು ರೂಪಾಯಿ ಹಣವನ್ನು 1991ರಿಂದ 1996ನೇ ಸಾಲಿನವರೆಗೆ ಖರ್ಚು ಮಾಡಿದ್ದಾರೆ. ಆದರೆ ಪಾಸ್ ಆದವರ ಸಂಖ್ಯೆ ಎಷ್ಟು ಎಂದರೆ ಇಪ್ಪತ್ತೆರಡು. ಅಂದರೆ ಸುಮಾರು ಒಬ್ಬ ವಿದ್ಯಾರ್ಥಿಗೆ ಐದು ಲಕ್ಷ ಅರವತ್ತು ಸಾವಿರಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆ. ಒಂದು ಪರೀಕ್ಷೆಯಲ್ಲಿ ಪಾಸ್ ಮಾಡಿಸಲಿಕ್ಕೆ ಒಬ್ಬ ವಿದ್ಯಾರ್ಥಿಗೆ ಐದು ಲಕ್ಷ ಅರವತ್ತು ಸಾವಿರಕ್ಕಿಂತ ಹೆಚ್ಚು ಹಣವನ್ನು ನೀವು ಖರ್ಚು ಮಾಡುತ್ತೀರಿ ಎಂದರೆ ಅದು ಯಾವ ಪರೀಕ್ಷೆ ತರಬೇತಿ ಎಂದರೆ ಅದು ಬ್ಯಾಂಕಿಂಗ್ ಸರ್ವೀಸ್ ಎಕ್ಸಾಮ್ ಇರಬಹುದು ಅಥವಾ ಕೆ.ಎ.ಎಸ್. ಇರಬಹುದು ಆದರೆ ಇಷ್ಟು ಅಗಾಧವಾಗಿ ನೀವು ಹಣವನ್ನು ವೆಚ್ಚ ಮಾಡಿದರೂ ನಿಮ್ಮ ಸಾಧನೆ ಏನು? ನಿಮಗೆ ಗಮನಿಸುವವರು ಯಾರೂ ಇಲ್ವಾ ಎಂದರೆ ಈ ಪರೀಕ್ಷಾ ತರಬೇತಿಯಲ್ಲಿ ಎಷ್ಟು ಹಣವನ್ನು ಬೇಕಾದರೂ ಯಾರು ಬೇಕಾದರೂ ಲೂಟಿ ಹೊಡೆಯಬಹುದಾ? ಆದ್ದರಿಂದ ಇದನ್ನು ನಿಯಂತ್ರಣಕ್ಕೆ ತರಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಬಹುಶಃ ನೀವು ಈ ಒಂದು ಕೋಟಿ ಇಪ್ಪತ್ಮೂರು ಲಕ್ಷ ರೂಪಾಯಿಗಳನ್ನು ಬೇರೆ ವಿಧಾನದಲ್ಲಿ ಖರ್ಚು ಮಾಡಿದ್ದರೆ ಈ ಜನಾಂಗದವರು ಬಹಳಷ್ಟು ಮುಂದೆ ಬರುತ್ತಿದ್ದರು ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಮತ್ತೆ ಈ ಸರ್ಕಾರಕ್ಕೆ ಎಸ್.ಎಸ್.ಎಲ್.ಸಿ.. ಮತ್ತು ಪಿ.ಯು.ಸಿ. ಮತ್ತು ಡಿಗ್ರಿ ಕಾಲೇಜುಗಳಲ್ಲಿ ಪಾಸ್ ಆದಂಥ ವಿದ್ಯಾರ್ಥಿಗಳ ಬಗ್ಗೆ ಅನುಕಂಪ ಇಲ್ಲ. ಏಕೆಂದರೆ ನಪಾಸಾದ ವಿದ್ಯಾರ್ಥಿಗಳನ್ನು ಯಾವ ರೀತಿ ಮೇಲೆ ಎತ್ತಬೇಕೆನ್ನುವ ಒಂದು ಯೋಜನೆ ಕೂಡ ಸರ್ಕಾರದಲ್ಲಿ ಇಲ್ಲ. ಈ ಎಸ್.ಎಸ್.ಎಲ್.ಸಿ. ಪಿ.ಯು.ಸಿ. ಮತ್ತು ಡಿಗ್ರಿಯಲ್ಲಿ ನಪಾಸಾದ ವಿದ್ಯಾರ್ಥಿಗಳಿಗೆ ಬೋಧನೆಯನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಹಾಗೆಯೇ ಪಿ.ಯು.ಸಿ. ಡಿಗ್ರಿ, ಡಿಪ್ಲೊಮಾ ಕೋರ್ಸುಗಳಲ್ಲಿಯೂ ತಾಂತ್ರಿಕ ಹಾಗೂ ಮೆಡಿಕಲ್ ಕಾಲೇಜುಗಳಲ್ಲಿ ಇರುವಂಥ ಒಂದು ಬುಕ್ ಬ್ಯಾಂಕ್ ವ್ಯವಸ್ಥೆಯನ್ನು ತರಬೇಕೆಂದು ಕೇಳಿಕೊಳ್ಳುತ್ತೇನೆ. ಈ ತಾಂತ್ರಿಕ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಮಾತ್ರ ಬಡ ವಿದ್ಯಾರ್ಥಿಗಳು ಇದ್ದಾರೆಂದು ಪರಿಗಣನೆ ಮಾಡುತ್ತಿದ್ದಾರೆ. ಆದರೆ ಪಿ.ಯು.ಸಿ. ಮತ್ತು ಡಿಗ್ರಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವಂಥ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಬಡವರಿಲ್ಲವೇ? ಆದಕಾರಣ ಅವರನ್ನು ಕೂಡ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಕರ್ನಾಟಕ ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿಗಳ ಸಂಖ್ಯೆಯನ್ನು ನೀಡಲಿಕ್ಕೆ ಇಚ್ಛೆಪಡುತ್ತೇನೆ. ಅವರ ಸಂಖ್ಯೆ ಮೂವತ್ತೊಂಭತ್ತು ಸಾವಿರದ ಎಂಟನೂರ ಹದಿನಾಲ್ಕು ಇದೆ. ಆದರೆ ಸರ್ಕಾರದಲ್ಲಿ ಸುಮಾರು ಇಪ್ಪತ್ತೈದು ಸಾವಿರದ ಒಂಭೈನೂರ ಎಂಭತ್ತು ವೇಕೆನ್ಸಿಗಳು ಖಾಲಿ ಇವೆ, ಒಂದು ವೇಳೆ ತಾವು ಏನಾದರೂ ಅವುಗಳನ್ನು ತುಂಬಿದ್ದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಈ ವೇಕೆನ್ಸಿಗಳನ್ನು ಫಿಲಪ್ ಮಾಡಿದರೆ ಬಹಳಷ್ಟು ಅನ್ ಎಂಪ್ಲಾಯಮೆಂಟ್ ಪರಿಶಿಷ್ಟ ಜಾತಿ ಹಗೂ ಪರಿಶಿಷ್ಟ ಪಂಗಡದಲ್ಲಿ ಕಡಿಮೆಯಾಗುತ್ತಿತ್ತು. ಅವರ ಆದಾಯಕ್ಕೆ ಅನುಕೂಲವಾಗಿ ಈ ಬಡ ಕುಟುಂಬಗಳು ಚೇತರಿಸಿಕೊಳ್ಳಲು ಒಂದು ಸಂದರ್ಭ ಇತ್ತು. ಆದರೆ ಅದರ ಬಗ್ಗೆ ಇದುವರೆಗೆ

ಸರ್ಕಾರ ಗಮನಹರಿಸಲಿಲ್ಲ ಆದಕಾರಣ ಅದಕ್ಕೆ ಒಂದು ಸ್ಪೆಶಲ್ ಡ್ರೈವ್ ಮಾಡಿ ಈ ಇಪ್ಪತ್ತೈದು ಸಾವಿರದ ಒಂಭೈನೂರ ಎಂಭತ್ತು ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಏಡೆಡ್ ಸ್ಕೂಲ್‌ಗಳಲ್ಲಿ ಮತ್ತು ಕಾಲೇಜುಗಳಲ್ಲಿ ಎಸ್‌ಸಿ/ಎಸ್‌ಟಿ ಸಿಬ್ಬಂದಿ ವರ್ಗ ಇಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿಯ ಪ್ರಕಾರ ಅಲ್ಲೂ ಕೂಡ ಅವರ ಸಿಬ್ಬಂದಿ ನೇಮಕ ಮಾಡುವ ಹಾಗೆ ಕಡ್ಡಾಯವಾಗಿ ಮಾಡುವ ಹಾಗೆ ತಾವು ಸೂಚನೆಯನ್ನು ಕೊಡಿ. ಏಕೆಂದರೆ ಅವರಿಗೆ ತಾವು ಅನುದಾನವನ್ನು ಕೊಡುತ್ತಿದ್ದೀರಿ, ಮತ್ತು ರೆಕಗ್ನೈಸೇಶನ್ ಮಾಡಿದ್ದೀರಿ. ತಾವು ಅನುದಾನ ಕೊಟ್ಟು ರೆಕಗ್ನೈಸ್ ಮಾಡಿರುವಂಥ ಆ ಶಾಲೆಗಳಲ್ಲಿ ನಮ್ಮ ಶಾಲೆಗಳಲ್ಲಿ ಇರತಕ್ಕಂಥ ಮೀಸಲಾತಿಯನ್ನು ತಾವು ಅಳವಡಿಸಲಿಲ್ಲ ಎಂದರೆ ತಾವು ಆ ಶಾಲೆಗಳನ್ನು ಅನ್ ರೆಕಗ್ನೈಸ್ ಮಾಡಿ ಆಗ ಅವು ನಿಯಂತ್ರಣಕ್ಕೆ ಒಳಪಡುತ್ತವೆ. ಇನ್ನು ಮುಂದಾದರೂ ಅವರು ಮೀಸಲಾತಿಯನ್ನು ಅಳವಡಿಸುತ್ತಾರೆ ಎಂದು ತಿಳಿದು ಅದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಅದರ ಜೊತೆಗೆ ಕಾಲೇಜುಗಳಲ್ಲಿ ಓದುವಂಥ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇಕಡಾ ಹದಿನೆಂಟರಷ್ಟು ಪ್ರಮಾಣದ ಸೀಟುಗಳನ್ನು ಮೀಸಲಾಗಿಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. 1976ನೇ ಸಾಲಿನಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರು ಪ್ರತಿಭಾವಂತರಾದ ಎಸ್‌ಸಿ/ ಎಸ್‌ಟಿಯವರಿಗೆ ನೇರನೇಮಕಾತಿ ಯೋಜನೆಯನ್ನು ತಂದರು. ಆದರೆ ಇದುವರೆಗೂ ಆ ಯೋಜನೆ ಯಡಿಯಲ್ಲಿ ಒಬ್ಬರನ್ನು ನೇಮಕ ಮಾಡಿಕೊಂಡಿಲ್ಲ. ಹಿಂದೆ ನಿಮ್ಮ ಸರ್ಕಾರ, ನಿಮ್ಮ ನಾಯಕರು ಮಾಡಿದಂಥದ್ದನ್ನು ನೀವು ಇಂಪ್ಲಿಮೆಂಟ್ ಮಾಡಲಿಲ್ಲ ಎಂದರೆ ಬಹಳಷ್ಟು ದುಃಖ ಆಗುತ್ತದೆ. ಈಗಲಾದರೂ ಈ ಕಾರ್ಯಕ್ರಮದ ಕಡೆಗೆ ಸರ್ಕಾರದವರು ಗಮನಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ. ಏಕೆಂದರೆ ಸುಮಾರು ವೇಕೆನ್ಸಿಗಳು ಇವೆ, ಅವುಗಳಿಗೆ ನೇರ ನೇಮಕಾತಿ ಇದೆ, ಸಂದರ್ಶನ ಇಲ್ಲ. ಕಾಲೇಜುಗಳಲ್ಲಿ, ಯೂನಿವರ್ಸಿಟಿಗಳಲ್ಲಿ ಅವರು ಫಸ್ಟ್ ಬಂದರೆ ಅವರನ್ನು ಗ್ರೂಪ್ ಎ ಗ್ರೂಪ್ ಬಿ ಗೆ ತರುವಂಥ ಒಂದು ಅವಕಾಶ ಏನು ನಿಲ್ಲಿಸಿದ್ದಾರೆ ಅದನ್ನು ಪ್ರಾರಂಭಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇವೊತ್ತು ಪರಿಶಿಷ್ಟ ಜಾತಿಯ ಭೂ ಕಬಳಿಕೆಯಲ್ಲಿ ಸುಮಾರು ಒಂದು ಲಕ್ಷ ಇಪ್ಪತ್ತಾರು ಸಾವಿರ ಪ್ರಕರಣಗಳು ಇವೆ. ಆದರೆ ಅವು ಇತ್ಯರ್ಥ ಆಗಿಲ್ಲ. ಅವುಗಳ ಕಡೆಗೆ ಗಮನಕೊಡಬೇಕು ಹಾಗೂ ಬಹಳಷ್ಟು ಪ್ರಕರಣಗಳು ಇತ್ಯರ್ಥವಾಗುವಂಥ ಸಾಧನೆಯನ್ನು ತಾವು ಮಾಡಿ ತಾವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪರವಾಗಿ ಇದ್ದೀರಿ ಎಂದು ತೋರ್ಪಡಿಸಬೇಕಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ. ಸುಮಾರು ಪರಿಶಿಷ್ಟ ಇರುವಂಥಾದ್ದು 382 ಗ್ರಾಮಗಳು. ನಮ್ಮ ರಾಜ್ಯದಲ್ಲಿ ಇವರಿಗೆ ಶುಚಿತ್ವವಾದ ಕುಡಿಯುವ ನೀರಿನ ವ್ಯವಸ್ಥೆ ಇನ್ನೂ 318 ಗ್ರಾಮಗಳಿಗೆ ತಲುಪಿಲ್ಲ. ಇದನ್ನು ತಾವು ತೀವ್ರವಾಗಿ ಪರಿಗಣನೆ ಮಾಡಬೇಕು. ದಿವಂಗತ ನಜೀರ್‌ಸಾಬ್ ಅವರು ಇದ್ದಂಥ ಸಂದರ್ಭದಲ್ಲಿ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಟ್ಟಿದ್ದರು. ಬಹಳಷ್ಟು ಕಡೆ ಇದು ಸಿಕ್ಕಿದೆ. ಆದರೆ ಈ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿಯವರು ಇರುವಂಥ ಗ್ರಾಮಗಳಿಗೆ ಇವತ್ತು ಶುಚಿತ್ವದ ನೀರು ಸಿಗುತ್ತಿಲ್ಲ

ಎಂದರೆ ಇದನ್ನು ನಾವು ಯಾವ ಸಾಧನೆ ಎಂದು ಹೇಳಿಕೊಳ್ಳಬೇಕಾಗಿದೆ? ಆದ್ದರಿಂದ ದಯವಿಟ್ಟು ಇದರ ಬಗ್ಗೆ ತಾವು ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಅಧ್ಯಕ್ಷರ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಗಂಗಾಕಲ್ಯಾಣ ಬಗ್ಗೆ ಒಂದು ಅಂಕಿಅಂಶವನ್ನು ನೀಡುತ್ತಿದ್ದೇನೆ. ಏಕೆಂದರೆ ಗಂಗಾಕಲ್ಯಾಣವನ್ನು ಬಹಳಷ್ಟು ನಾವು ಪ್ರಚಾರ ಮಾಡಿದ್ದೀವಿ. ಆದರೆ ಪ್ರಚಾರ ಮಾಡಿದ ರೀತಿಯಲ್ಲಿ ಕಾರ್ಯಗತ ಆಗಿದೆಯೇ ಅಥವ ಇಲ್ಲವೇ ಎನ್ನುವ ಅವಲೋಕನವನ್ನು ಇವತ್ತು ಖಂಡಿತ ತಾವು ಮಾಡಿಕೊಳ್ಳಬೇಕಾಗಿದೆ. ಇವತ್ತು ಸುಮಾರು 1995-96, 1996-97ನೇ ಸಾಲಿನಲ್ಲಿ ಒಟ್ಟು ಕೊರೆದ ಬಾವಿಗಳ ಸಂಖ್ಯೆ 5,207.ಆದರೆ ಇದರಲ್ಲಿ ಸಫಲವಾದ ಬಾವಿಗಳು 4,967.ಮತ್ತು ವಿಫಲವಾದದ್ದು, ನೀರು ಇಲ್ಲದೇ ಇರುವಂಥ ಭಾವಿಗಳು 240.ಪಂಪು ಸೆಟ್ಟುಗಳನ್ನು ನಾವು ಖರೀದಿ ಮಾಡಿದ್ದು 3,300, ಅಳವಡಿಸಿದ್ದು 1,861. ಬಾಕಿ ಉಳಿಕೆ ಎಂದರೆ ಖರೀದಿ ಮಾಡಿದಂಥ 3,300ರಲ್ಲಿ ಬಾಕಿ ಸ್ಟಾಕ್ ಅಕೌಂಟ್ ಇರುವುದು 1,139. ಇವತ್ತು 4,967 ಬಾವಿಗಳನ್ನು ನಾವು ಕೊರೆದಿದ್ದರೆ ಸಫಲವಾಗಿರುವ ಬಾವಿಗಳಿಗೆ ವಿದ್ಯುತ್ ಜೋಡಣೆ ಮಾಡಿರುವುದು ಕೇವಲ 137. ಇಲ್ಲಿ ಗಮನಿಸಬೇಕಾದಂಥಾದ್ದು ಏನೆಂದರೆ, ಕೋಟ್ಯಾಂತರ ರೂಪಾಯಿ ಹಣ, ಸುಮಾರು 30 ಕೋಟಿ ಹಣವನ್ನು ನಾವು ವೆಚ್ಚ ಮಾಡಿದ್ದೇವೆ. ಯಾವುದೇ ಒಂದು ಯೋಜನೆಯನ್ನು ನಾವು ಪೂರ್ವಭಾವಿಯಾಗಿ ಯೋಚನೆ ಮಾಡಿಲ್ಲ. ಇವತ್ತು ಏನಾಗಿದೆ ಎಂದರೆ ಕೊರೆದಿರುವಂಥ 4967 ಬಾವಿಗಳಿಗೆ ಇನ್ನೂ ಎರಡು ವರ್ಷದಲ್ಲಿ ನೀವು ವಿದ್ಯುತ್ ಸಂಪರ್ಕ ನೀಡಿಲ್ಲವೆಂದರೆ ಅಷ್ಟು ಹಣ ಪೋಲಾಗುತ್ತದೆ? ಇದರ ಜೊತೆಗೆ ನೀವು 3,300 ಪಂಪುಸೆಟ್ಟುಗಳನ್ನು ಖರೀದಿ ಮಾಡಿದ್ದೀರಿ. ಯಾವ ಆಧಾರದ ಮೇಲೆ ಖರೀದಿ ಮಾಡಿದ್ದೀರಿ? ಯಾವ ಉದ್ದೇಶ ಇಟ್ಟುಕೊಂಡು ನೀವು ಖರೀದಿ ಮಾಡಿದ್ದೀರಿ? ಇದರ ಅವಶ್ಯಕತೆ ಇತ್ತೆ? ಆ ಪಂಪುಸೆಟ್ಟುಗಳು ನಿಮಗೆ ಸಿಗುತ್ತಿರಲಿಲ್ಲವಾ? ಇದನ್ನು ಖರೀದಿ ಮಾಡಿಕೊಂಡು ನಿಮ್ಮ ಗೋಡೌನ್‌ನಲ್ಲಿ ಸ್ಟಾಕ್ ಮಾಡಿಕೊಳ್ಳಬೇಕಾಗಿತ್ತಾ? ಇದನ್ನು ನಾವು ಯೋಚನೆ ಮಾಡಬೇಕಾಗಿದೆ. ಏಕೆಂದರೆ ಇಲ್ಲಿ ನಿಯಂತ್ರಣ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಾವಧಾನವಾಗಿ ಹೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅವರು ಸಮಯದ ಅಭಾವ ಎಂದು ಹೇಳುತ್ತಿದ್ದಾರೆ. ತಾವು ಯಾರಾದರೂ ಗಮನಿಸಿರಬಹುದು. ಎಸ್.ಸಿ / ಎಸ್.ಟಿ ಜನಾಂಗದ ಬಗ್ಗೆ ಹೇಳುತ್ತಿದ್ದಾರೆ, ನಾವು ಮಾತನಾಡುವುದನ್ನು ಬರೆದುಕೊಳ್ಳುತ್ತಿದ್ದಾರೆ. ಗಂಗಾ ಕಲ್ಯಾಣ ಯೋಜನೆಯಲ್ಲಿ ನಾವು 5,207 ಬೋರ್‌ವೆಲ್‌ಗಳನ್ನು ತೆಗೆದಿದ್ದರೆ ಇವತ್ತಿನವರೆಗೆ ವಿದ್ಯುದ್ದೀಕರಣ ಆಗಿರುವುದು ಕೇವಲ 137 ಬಾವಿಗಳಿಗೆ ಮಾತ್ರ. ಹಾಗಾದರೆ ಬಹುಶಃ ಈ ಸಮಾಜಕ್ಕೆ ಎಷ್ಟರಮಟ್ಟಿಗೆ ನಾವು ನ್ಯಾಯವನ್ನು ಒದಗಿಸಿಕೊಡುತ್ತೇವೆ? ಅದು ಎಷ್ಟು ದೊಡ್ಡ ಪ್ರಮಾಣದಲ್ಲಿ ಅನ್ಯಾಯ ಮಾಡಿತ್ತಿದ್ದೇವೆ? ಸರ್ಕಾರ ಇವರ ಪಾಲಿಗೆ ಬದುಕಿದೆಯಾ? ಎನ್ನುವ ಪ್ರಶ್ನೆ ಬರುತ್ತದೆ.

ಅಧ್ಯಕ್ಷರು : ವಿದ್ಯುದ್ದೀಕರಣ ನಿಧಾನಕ್ಕೆ ಮಾಡಿ. ಪಂಪುಗಳ ಅಭಿವೃದ್ಧಿ ಮೊದಲು ಮಾಡಿಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವು ಇದರಿಂದಲೇ ನಾನು ಪ್ರಸ್ತಾಪ ಮಾಡಿದೆ. ಇದು ನಿಜ ಎಂದರೆ ಇದನ್ನು ಸರಿಪಡಿಸುವುದಕ್ಕೆ ಏನಾದರೂ ಮಾಡುತ್ತೀರಾ?

ಶ್ರೀ ಶರಣಬಸಪ್ಪ ದರ್ಶನಾಪುರ (ವಿದ್ಯುತ್ ರಾಜ್ಯಮಂತ್ರಿ) : ಈ ವಿಷಯದಲ್ಲಿ ಈಗಾಗಲೇ ನಮ್ಮ ಇಲಾಖೆಯಿಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ನಮ್ಮ ಕೆ.ಇ.ಬಿ. ಇಲಾಖೆಗೆ ಸುಮಾರು 1500 ಟೋಟಲ್ ಅಪ್ಲಿಕೇಶನ್ಸ್ ಎಸ್‌ಸಿ:ಎಸ್‌ಟಿ ಕಾರ್ಪೊರೇಷನ್‌ನಿಂದ ಬಂದಿವೆ. ನವೆಂಬರ್ 1 ರೊಳಗೆ ಇದೆಲ್ಲ ಕ್ಲಿಯರ್ ಮಾಡುತ್ತೇವೆ ಎಂದು ಈಗಾಗಲೇ ತಿಳಿಸಿದ್ದೇವೆ. ನವೆಂಬರ್ 1ರೊಳಗೆ ಎಲ್ಲ ಕ್ಲಿಯರ್ ಮಾಡುತ್ತೇವೆ. ಮತ್ತೆ ಮುಂದೆ ಬಂದಂಥ ಅಪ್ಲಿಕೇಶನ್‌ಗಳನ್ನು ಅನಂತರ ಕ್ಲಿಯರ್ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : 1995-96, 1996-97 ಈ ಎರಡು ವರ್ಷದಲ್ಲಿ 5,207 ಪಂಪುಸೆಟ್ಟುಗಳಿಗೆ ಮೋಟಾರುಗಳನ್ನು ಖರೀದಿ ಮಾಡಿದ್ದೀರಿ. ಸಂಬಂಧಪಟ್ಟ ಇಲಾಖೆಯವರು ಇವರಿಂದ ಕಮಿಷನ್ ತೆಗೆದುಕೊಂಡು ಆಗಿದೆ. ಆದರೆ ಅವುಗಳನ್ನು ಅಳವಡಿಸಿಲ್ಲ, ವಿದ್ಯುತ್ ಕೊಟ್ಟಿಲ್ಲ ಎಂದು ನಾವು ಹೇಳುತ್ತಿರುವುದು.

ಶ್ರೀ ಶರಣಬಸಪ್ಪ ದರ್ಶನಾಪುರ : ಕೆ.ಇ.ಬಿ.ಗೆ 1,500 ಅಪ್ಲಿಕೇಶನ್ಸ್ ವಿದ್ಯುತ್ ಕನೆಕ್ಷನ್ ಕೊಡಿಸಿ ಎಂದು ಬಂದಿವೆ. ಮಾನ್ಯ ಸದಸ್ಯರಿಗೆ ಕೂಡ ಇದು ಗೊತ್ತಿರಬಹುದು. ನವೆಂಬರ್ 1 ರೊಳಗೆ ವಿದ್ಯುದ್ದೀಕರಣ ಮಾಡಿಕೊಡುತ್ತೇವೆ. ಒಂದು ವಾರದ ಹಿಂದೆ ನಾವು ಇದರ ಬಗ್ಗೆ ತೀರ್ಮಾನ ಕೂಡ ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : ನೀವು ಒಂದು ಸಲ ಚೆಕ್ ಮಾಡಿಕೊಳ್ಳಿ. ಅವರು ಸಹ ಒಂದು ಸಲ ಫಿಗರ್ಸನ್ನು ಚೆಕ್ ಮಾಡಿಕೊಳ್ಳುತ್ತಾರೆ.

ಶ್ರೀ ಹೆಚ್. ಡಿ. ಬಸವರಾಜು : ಅಧ್ಯಕ್ಷರೇ, ಇಲ್ಲಿ ನಾನು ಸರ್ಕಾರದ ಗಮನ ಸೆಳೆಯುತ್ತಿರುವುದು ಏನು ಎಂದರೆ, ಇವತ್ತು ನಾವು ನೀಡುತ್ತಿರುವ ಹಣವನ್ನು ಸರಿಯಾದ ಯೋಜನೆಯಿಂದ ಕಾರ್ಯಗತ ಮಾಡುವುದಕ್ಕೆ ಅತಿ ಉತ್ಸಾಹದಿಂದ ಹೊರಟಿದ್ದಾರೆ. ಇವತ್ತು 4,967 ಬಾವಿಗಳನ್ನು ಏಕಾಏಕಿಯಾಗಿ ಕೊರೆಯುವುದಕ್ಕೆ ಮುಂಚೆ ಎಷ್ಟು ಬಾವಿಗಳಿಗೆ ವಿದ್ಯುತನ್ನು ನಾವು ಒದಗಿಸುವುದಕ್ಕೆ ಸಾಧ್ಯವಿದೆ ಎಂದು ಯೋಚನೆಯನ್ನು ಅವರು ಯಾರೂ ಮಾಡಲಿಲ್ಲ. ಇಷ್ಟು ಬಾವಿಗಳನ್ನು ಏಕಾಏಕಿಯಾಗಿ ಕೊರೆಯುವುದಕ್ಕೆ ಇವರಿಗೆ ಯಾರು ಹೇಳಿದರು? ಇಷ್ಟು ಬಾವಿಗಳನ್ನು ಕೊರೆದಮೇಲೆ ಅದಕ್ಕೆ ಎಷ್ಟು ವೇಗವಾಗಿ ವಿದ್ಯುತ್ ಜೋಡಣೆ ಆಗುತ್ತದೆ ಎನ್ನುವಂಥ ಅಂದಾಜನ್ನು ಅವರು ಇಟ್ಟುಕೊಳ್ಳಬೇಕಾಗಿತ್ತು. ಈ ರಾಜ್ಯ ವಿದ್ಯುತ್ ಕ್ಷಾಮದಿಂದ ತಹತಹಿಸುತ್ತಿದ್ದಂಥ ಸಂದರ್ಭದಲ್ಲಿ ಇವರು 4,967 ಬಾವಿಗಳನ್ನು ಕೊರೆದಿದ್ದಾರೆ. ಇದಕ್ಕೆ ನಾವು ಏನೂಂತ ಹೇಳಬೇಕು? ಆಯಿತು ಕೊರೆದರು, ಇಲ್ಲ ಎಂದು ಹೇಳುವುದಿಲ್ಲ. ಆದರೆ 3,300 ಪಂಪುಸೆಟ್ಟುಗಳೆಂದರೆ ಒಂದು ಪಂಪುಸೆಟ್ಟಿಗೆ ಸುಮಾರು ಎಷ್ಟು ಖರ್ಚಾಗುತ್ತದೆ? ಇದು 44 ಸಾವಿರದಿಂದ ಪ್ರಾರಂಭವಾಗುತ್ತದೆ. ಇವತ್ತು 44 ಸಾವಿರ ಕೊಟ್ಟು ಪಂಪುಗಳನ್ನು ನಮ್ಮ ಗೋಡೌನ್‌ನಲ್ಲಿ

ಇಟ್ಟುಕೊಳ್ಳುತ್ತಾರೆ ಎಂದರೆ ಅದೇನು ಮಾರ್ಕೆಟ್‌ನಲ್ಲಿ ಸಿಗದೇ ಇರುವಂಥ ಪಂಪುಸೆಟ್ಟುಗಳಾ? ಆದ್ದರಿಂದ ಇವತ್ತು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯ ಮಾಡುವುದು ಏನೆಂದರೆ, ಇದರಲ್ಲಿ ಬಹಳಷ್ಟು ಅವ್ಯವಹಾರವಾಗಿದೆ ಎಂದು ನನಗನ್ನಿಸುತ್ತದೆ. ಇವತ್ತು 4,967 ಬಾವಿಗಳನ್ನು ನೀವು ಕೊರೆದಿದ್ದೀರಿ. ಅದರಲ್ಲಿ ವಿಫಲವಾಗಿರುವಂಥ 240 ಬಾವಿಗಳಿಗೆ ಇವರು 57,89,085 ರೂಪಾಯಿ ಹಣ ಪಾವತಿ ಮಾಡಿದ್ದಾರೆ. ವಿಫಲವಾದಂಥ ಭಾವಿಗಳಿಗೆ ಹಣ ಪಾವತಿ ಮಾಡಿದ್ದಾರೆ ಎಂದರೆ ಇದು ನಿಜವಾಗಿಯೂ ಒಂದು ಸದನ ಸಮಿತಿಯನ್ನು ನೇಮಕಮಾಡಿ ಸರ್ಕಾರ ಏನು ಸತ್ಯಾಂಶ ಇದೆ ಎನ್ನುವುದನ್ನು ಹೊರಗಡೆಗೆ ತರಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಇದರ ಜೊತೆಗೆ ಆ ಗುತ್ತಿಗೆಗಳನ್ನು ನೀಡುವಂಥ ಸಂದರ್ಭದಲ್ಲಿ ನೀವು ಯಾವ್ಯಾವ ಮಾನದಂಡಗಳನ್ನು ಅಳವಡಿಸಿದ್ದೀರಿ? ಇವತ್ತು ಕೊರೆದ ಬಾವಿಗಳಿಗೇ ಆಗಲಿ, ಅಥವಾ ಪಂಪುಗಳ ಖರೀದಿಗೆಯಾಗಲೀ, ಮತ್ತೆ ಈಗ 4,967 ಬಾವಿಗಳಲ್ಲಿ 137ಕ್ಕೆ ಮಾತ್ರ ವಿದ್ಯುತ್ ಕೊಟ್ಟಿದ್ದೀರಿ. ಮಾನ್ಯ ಸಚಿವರು ಇನ್ನು ಒಂದು ವರ್ಷದಲ್ಲಿ ಕೊಡುತ್ತೇವೆ ಎಂದು ಹೇಳಿದರು ಅಧ್ಯಕ್ಷರೇ, ಇದು ಖಂಡಿತ ಸಾಧ್ಯವಿದೆಯಾ? ನಿಜವಾಗಿಯೂ ನನಗೆ ಸಂದೇಹ ಇದೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಎಸ್‌ಸಿ/ಎಸ್‌ಟಿ ಕಾರ್ಪೋರೇಷನ್‌ನಿಂದ ಒಟ್ಟು 1,500 ಅಪ್ಲಿಕೇಶನ್‌ಗಳು ಬಂದಿವೆ. ನವೆಂಬರ್ 1ರೊಳಗೆ ಎಲ್ಲ ಕ್ಲಿಯರ್ ಮಾಡುತ್ತೇವೆ. ಅದು ಸಾಧ್ಯತೆ ಇದೆ.

ಶ್ರೀ ಹೆಚ್. ಡಿ. ಬಸವರಾಜು : ಇನ್ನು ಮೂರು ತಿಂಗಳಲ್ಲಿ 1500 ಎಂದು ಹೇಳುತ್ತೀರಿ, ಉಳಿದಿದ್ದು?

ಶ್ರೀ ಶರಣಬಸಪ್ಪ ದರ್ಶನಾಪುರ : ಕೆ.ಇ.ಬಿ.ಗೆ ಬಂದಿರುವುದು 1,500. ಈಗಾಗಲೇ ಮುಖ್ಯಮಂತ್ರಿಗಳು ಕೂಡ ಹೇಳಿದ್ದಾರೆ. ರಿಮೈನಿಂಗ್ ಬೋರ್‌ವೆಲ್ಸ್ ಏನು ಹೊಡೆಸಿದ್ದಾರೆ, ಅದಕ್ಕೆ ಕೂಡ ಅಪ್ಲಿಕೇಶನ್ಸ್ ಕೊಟ್ಟು ಕಳಿಸಿದರೆ ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು.

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಮಂತ್ರಿ) : ಮಾನ್ಯ ಯಡಿಯೂರಪ್ಪನವರು ಸರ್ಕಾರ ಇದೆಯೇ ಇಲ್ಲವೇ ಎಂದು ಕೇಳಿದರು. ನಾವು ಎರಡು ವರ್ಷದಲ್ಲಿ ಎಷ್ಟು ಮಾಡಿದ್ದೇವೆ ಮತ್ತು ಹಿಂದೆ ಎಷ್ಟು ಮಾಡಿದ್ದಾರೆ ಎಂದು ಲೆಕ್ಕಹಾಕಿ. ಕರೆಂಟ್ ಕೊಡುವುದರಲ್ಲಿ ಸ್ವಲ್ಪ ತಡವಾಗಿರಬಹುದು, ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ಪ್ರಗತಿದಾಯಕವಾಗಿ ನಾವು ಕೆಲಸ ಮಾಡುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾವು ಹೇಳಿದ್ದನ್ನು ಗಮನಿಸಿ ನಾಳೆ ತಾವು ಉತ್ತರ ಕೊಡಿ. ನಾನು ಏನು ಹೇಳಿದೆ ಎಂದರೆ, 4,967 ಬಾವಿಗಳನ್ನು ತೆಗೆದಿದ್ದೇವೆ. ಇದುವರೆಗೆ ವಿದ್ಯುದ್ದೀಕರಣ ಆಗಿರುವುದು ಕೇವಲ 137ಕ್ಕೆ ಮಾತ್ರ. ಈಗಾಗಲೇ ಇದಕ್ಕೆ ಬೇಕಾದಂಥ ಪಂಪುಗಳನ್ನು ಕೊಂಡಿದ್ದೇವೆ. ವಿದ್ಯುತ್‌ಸರಬರಾಜು ಮಾಡದೇನೆ ಪಂಪುಗಳನ್ನು ಕೊಂಡುಕೊಂಡು ಆ ಪರ್ಸೆಂಟೇಜ್‌ನಲ್ಲಿ ಒಂದಿಷ್ಟು ಕಮೀಷನ್ ಅಲ್ಲಿ ಬರುತ್ತದೆ. ಅದನ್ನು ತೆಗೆದುಕೊಂಡು ಸಂಬಂಧಪಟ್ಟ ಇಲಾಖೆಯವರು ಈ ಮೋಟಾರ್‌ಗಳನ್ನು ಗೋಡೌನ್‌ನಲ್ಲಿ ಇಟ್ಟಿರುವುದರಿಂದ ಇದು ನ್ಯಾಷನಲ್ ವೇಸ್ಟ್ ತಾನೆ? ಬಸವರಾಜು ಅವರು ಕೇಳುತ್ತಿರುವ ಪ್ರಶ್ನೆ ಏನೆಂದರೆ, ನೀವು ಬೋರ್‌ವೆಲ್ ತೆಗೆದದ್ದು, ನಮ್ಮ ಟಾರ್ಗೆಟ್ ಏನು?

ಇದಕ್ಕೆ ಮೋಟಾರ್ ಅಳವಡಿಸಿದ್ದರೆ ಇದುವರೆಗೂ ವಿದ್ಯುತ್ ಏಕೆ ಕೊಟ್ಟಿಲ್ಲ? 1995-96ರದ್ದು ನಾವು ಕೇಳುತ್ತಿರುವುದು, ಈ ವರ್ಷದ್ದು ಅಲ್ಲ ಸ್ವಾಮಿ. ಅಂದರೆ ಬೋರ್‌ವೆಲ್ ತೆಗೆಯುವಂಥಾದ್ದು, ಮೋಟಾರ್‌ಗಳನ್ನು ಕೊಳ್ಳುವಂಥಾದ್ದು ಅದು ಬಡವರಿಗೆ ಅನುಕೂಲ ಕೊಡಬೇಕು ಎಂದು ಅಲ್ಲ. ಅಲ್ಲಿ ಒಂದು ಪರ್ಸೆಂಟೇಜ್ ಕಮೀಷನ್ ನಿಮಗೆ ಸಿಗುತ್ತದೆ. ನಾನು ಪ್ರಾಮಾಣಿಕವಾಗಿ ನಿಮಗೆ ಹೇಳುತ್ತಿದ್ದೇನೆ. ನೀವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸದನ ಸಮಿತಿಯನ್ನು ಮಾಡಿ. ಆ ಮೋಟಾರ್‌ಗಳು ಸಹ ಯಾರಿಗೂ ಬೇಡವಾದ ಒಂದು ಕಂಪನಿಯಿಂದ ಖರೀದಿ ಮಾಡಿ, ನಾಳೆ ಎರಡು ವರ್ಷವಾದ ಮೇಲೆ ಇದನ್ನು ಅಳವಡಿಸಿದಾಗ ಅದು ಒಂದು ದಿನ ಕೂಡ ಕೆಲಸ ಮಾಡುವುದಿಲ್ಲ. ಒಂದು ನೂರು ಉದಾಹರಣೆಗಳನ್ನು ನಿಮಗೆ ನಾನು ಕೊಡುತ್ತೇನೆ. ಯಾವ ಕಂಪನಿ ಎಂದು ನೀವು ಚೆಕ್ ಮಾಡಿ. ಯಾರು ಅದಕ್ಕೆ ಕಾರಣಕರ್ತರು ಎಂಬುದು ಸದನ ಸಮಿತಿ ಮಾಡಿದಾಗ ಅಥವಾ ಒಂದು ಎನ್‌ಕ್ವೈರಿ ಮಾಡಿ ಕ್ರಮ ತೆಗೆದುಕೊಳ್ಳಿ. ಎಸ್‌ಸಿ/ಎಸ್‌ಟಿಯಲ್ಲಿ ತಮಗೆ ಗೊತ್ತಿದೆ, ಕೋಟ್ಯಾಂತರ ರೂಪಾಯಿ ಅಲ್ಲಿ ಲಾಸ್ ಆಗುತ್ತಿದೆ. ದುಡ್ಡಿನ ಅಭಾವ ಇಲ್ಲ. ದುಡ್ಡಿದ್ದೂ ಸಹ ಏನು ಅಚೀವ್ ಆಗಬೇಕಾಗಿತ್ತು, ಅದು ಆಗಿಲ್ಲ. ಅದಕ್ಕೇ ನಾನು ಆರೋಪ ಮಾಡುತ್ತಿದ್ದೇನೆಯೇ ಹೊರತು ಬೇರೆ ಯಾವುದೇ ದೃಷ್ಟಿಯಿಂದ ಅಲ್ಲ.

ಶ್ರೀ ಹೆಚ್. ಡಿ. ಬಸವರಾಜು : ಈ ಯೋಜನೆಯನ್ನು ಕಾರ್ಯಗತ ಮಾಡುವುದರಲ್ಲಿ ಒಂದು ಪ್ರಾಮಾಣಿಕ ಪ್ರಯತ್ನದ ಬಗ್ಗೆ ನನಗೆ ಒಂದು ಸಂದೇಹ ಇರುವುದರಿಂದ, ನಾನು ತಮ್ಮ ಮೂಲಕ ಸರ್ಕಾರವನ್ನು ಮಾಡುತ್ತಿದ್ದೇನೆ. ಒಂದು ಸದನ ಸಮಿತಿಯನ್ನು ನೇಮಕ ಮಾಡಿ. ಆಗ ಏನು ಅದರಲ್ಲಿ ಸತ್ಯಾಂಶ ಇದೆ ಅದು ಹೊರಗಡೆಗೆ ಬರುತ್ತದೆ. ಯಾರ್ಯಾರು ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆ, ಅದು ಕೂಡ ಹೊರಗೆ ಬರುತ್ತದೆ ಎಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸದನ ಸಮಿತಿಗೆ ಒತ್ತಾಯ ಮಾಡುತ್ತಾ, ಇನ್ನು ಎಸ್‌ಸಿ/ಎಸ್‌ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ತಾವು ಆದಾಯ ಮಿತಿಯನ್ನು ನೀಡಿ, ಅದಕ್ಕೆ ಒಳಪಟ್ಟವರಿಗೆ ಮಾತ್ರ ಸಾಲ ನೀಡಿಕೆಯನ್ನು ತಾವು ಮಾಡುತ್ತಾ ಇದ್ದೀರಿ. ದಯವಿಟ್ಟು ಇದನ್ನು ತಪ್ಪಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ಒಂದು ಸಣ್ಣ ವಿಚಾರ ಇರಬಹುದು. ಆದರೆ, ಈ ಸಂದರ್ಭದಲ್ಲಿ ಅದನ್ನು ತಿಳಿಸುವುದು ಉತ್ತಮ ಎಂದು ಅನ್ನಿಸುತ್ತದೆ. ಇವತ್ತು ತಾವು ಎಂ.ಡಿ.ಯವರ ಮನೆಗೆ ಬಾಡಿಗೆ ಎಂದು 12 ಸಾವಿರ ರೂಪಾಯಿಗಳನ್ನು ತಿಂಗಳಿಗೆ ನೀಡುತ್ತಿದ್ದೀರಿ. ಇದನ್ನು ನಾವು ಯೋಚನೆ ಮಾಡಬೇಕಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಇರುವಂಥ ಕಾರ್ಪೊರೇಷನ್‌ಗೆ ಇತರೆ ಯಾವುದೇ ಕಾರ್ಪೊರೇಷನ್‌ಗೆ ನೀಡದೇ ಇರುವಂಥ ಒಂದು ಸವಲತ್ತನ್ನು ಈ ಎಂ.ಡಿ.ಗೆ ಕೊಡುವಂಥ ಸಾಧ್ಯತೆ ಏನು ಬಂದಿದೆ? ಇದು ತಿಂಗಳಿಗೆ 12 ಸಾವಿರ ರೂಪಾಯಿ ಹಣ ಅವರ ಮನೆಬಾಡಿಗೆಗೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ತನಿಖೆ ಮಾಡಿ ಆ ಒಂದು ಪದ್ಧತಿಯನ್ನು ನಿಲ್ಲಿಸಬೇಕು. ಆ ಪದ್ಧತಿಗೆ ಮೂಲಕಾರಣರಾದಂಥವರ ಮೇಲೆ ಕೂಡ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು, ಕೆ.ಎಸ್.ಎಫ್.ಸಿ.ಯಿಂದ ಇವತ್ತು ಸಾವಿರಾರು ಕೋಟಿ ಹಣವನ್ನು ಎಲ್ಲ ಜನಾಂಗದವರಿಗೆ ನೀಡುತ್ತಿದ್ದೀರಿ. ಅಧ್ಯಕ್ಷರೇ, ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುವುದು ಏನೆಂದರೆ, ಈ ಜನಾಂಗದವರ ಸಲುವಾಗಿ ನೀಡಲಿಕ್ಕೆ ಒಟ್ಟು ಹಣದಲ್ಲಿ ಶೇಕಡಾ 18ರಷ್ಟು ಹಣವನ್ನಾದರೂ ಮೀಸಲಿಟ್ಟು ಅವರಿಗೂ ಕೂಡ

ದಕ್ಕುವಂಥ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು. ಏಕೆಂದರೆ ಎಸ್.ಸಿ/ಎಸ್‌ಟಿ ಡೆವಲಪ್‌ಮೆಂಟ್ ಕಾರ್ಪೋರೇಷನ್ ಜೊತೆಗೆ ಕೆ.ಎಸ್.ಎಫ್.ಸಿ. ನಮ್ಮ ರಾಜ್ಯಸಂಸ್ಥೆಯಾಗಿರುವುದರಿಂದ ಇದರ ಮೂಲಕ ತಾವು ಸಾಲ ನೀಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಕಿಡ್ನಿ, ಕ್ಯಾನ್ಸರ್, ಹೃದಯ ಕಾಯಿಲೆಗಳು, ಬಂದಂಥ ಸಂದರ್ಭದಲ್ಲಿ ಯಾವುದಾದರೂ ಒಂದು ನಿಧಿಯನ್ನು ಮಾಡಿ, ಸುಮಾರು 25 ಲಕ್ಷ ರೂಪಾಯಿ ಹಣವನ್ನು ಹೋದಸಾರಿ ನೀವು ಮುಡಿಪಾಗಿ ಇಟ್ಟಿದ್ದು ಅದರಲ್ಲಿ ಒಂದು ನಯಾಪೈಸೆ ಹಣವನ್ನೂ ಖರ್ಚುಮಾಡಿಲ್ಲ. ಈ ಸಲ ಯಾವುದೇ ಹಣವನ್ನು ನೀವು ಮುಡುಪಾಗಿಡಲಿಲ್ಲ. ಆದ್ದರಿಂದ, ತಾವು ಈ ಪಂಗಡದವರ ಪರವಾಗಿ ಈ ವ್ಯವಸ್ಥೆ ಮಾಡಿದರೆ ಅದು ತಮ್ಮ ಸರ್ಕಾರದ ಒಂದು ಸಾಧನೆಯಾಗುತ್ತದೆ, ಇದರ ಬಗ್ಗೆ ಕೂಡ ಯೋಚನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಸಹಕಾರ ಇಲಾಖೆಯಲ್ಲಿ ಪ್ರತಿಶತ ಎಷ್ಟು ಹಣ ಖರ್ಚು ಆಗಬೇಕಿತ್ತೋ ಅದು ಕೂಡ ಖರ್ಚಾಗುತ್ತಿಲ್ಲ. ಮಾನ್ಯ ಸಹಕಾರ ಮಂತ್ರಿಗಳು ಇಲ್ಲಿ ಇರುವುದರಿಂದ, ತಮ್ಮನ್ನು ಕೂಡ ಮಾನ್ಯ ಅಧ್ಯಕ್ಷರ ಮೂಲಕ ನಾನು ಕೇಳುತ್ತಿದ್ದೇನೆ. ಹಣ ಸರಿಯಾದ ರೀತಿಯಲ್ಲಿ ಉಪಯೋಗ ಆಗುವಂಥಾದ್ದನ್ನು ಮಾಡಿ. ರುದ್ರಭೂಮಿ ಬಗ್ಗೆ ನಾನು ಕೊನೆಯಾದಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಕೋಟಿ ರೂಪಾಯಿ ಹಣದಿಂದ ರುದ್ರಭೂಮಿಯನ್ನು ಕೊಂಡುಕೊಂಡು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಕೊಡುತ್ತೇವೆ ಎಂದು ತಾವು ಹೇಳಿದಿರಿ. ಆದರೆ ಅದರಲ್ಲಿ 75 ಲಕ್ಷ ರೂಪಾಯಿ ಹಣವನ್ನು ವಾಪಸ್ಸು ಪಡೆದಿದ್ದೀರಿ. ಒಂದೇ ಒಂದು ಇಂಚು ರುದ್ರಭೂಮಿಯನ್ನೂ ಅವರಿಗೆ ನೀಡಿಲ್ಲ. ಏಕೆಂದರೆ ತಾವು ಘೋಷಣೆ ಮಾಡಿದಮೇಲೆ ಕೊನೆಯಪಕ್ಷ ಒಂದು ಪರ್ಸೆಂಟ್ ಆದರೂ ತಾವು ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದರೆ ಬಹುಶಃ ನಾನು ತಮಗೆ ಅಭಿನಂದನೆಯನ್ನು ಮಾಡುತ್ತಿದ್ದೆ. ದಯವಿಟ್ಟು ನೀವು ಅವರ ಬಗ್ಗೆ ನಿಜವಾದ ಕಳಕಳಿ ತೋರಿಸಲಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಮತ್ತು ತಾವು ಇದನ್ನು ಮಾಡಬೇಕು ಎಂದು ಕೂಡ ಒತ್ತಾಯ ಮಾಡುತ್ತೇನೆ. ಇನ್ನು ಕೊನೆಯದಾಗಿ, ಗಿರಿಜನರ ಬಗ್ಗೆ ಹೇಳಿಬಿಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ. ಏಕೆಂದರೆ ಬೇಕಾದಷ್ಟು ಸಮಯವನ್ನು ತಾವು ಉದಾರವಾಗಿ ನೀಡಿದ್ದೀರಿ. ಮತ್ತೆ ಸಮಯ ತೆಗೆದುಕೊಂಡರೆ ಅದು ಸಮಂಜಸ ಆಗುವುದಿಲ್ಲ. ಆದರೆ, ಗಿರಿಜನರಿಗೆ ಕೊಡಬೇಕಾದ ಒಂದು ಪ್ರಾತಿನಿಧ್ಯವನ್ನು ಈ ಸರ್ಕಾರದಲ್ಲಿ ನೀಡುತ್ತಿಲ್ಲ ಎಂದು ಮನನೊಂದುಕೊಂಡು ನಾನು ಹೇಳುತ್ತಿದ್ದೇನೆ. ಇವತ್ತು ಶಾಸಕಾಂಗದಲ್ಲಾಗಲೀ, ನ್ಯಾಯಾಂಗದಲ್ಲಾಗಲೀ, ಕಾರ್ಯಾಂಗದಲ್ಲಾಗಲೀ, ಯಾವುದೇ ರೀತಿಯಲ್ಲಿ ಪರಿಶಿಷ್ಟ ಪಂಗಡದಿಂದ ಬಂದಂಥ ಎಷ್ಟು ಜನ ಇಲ್ಲಿ ಶಾಸಕರು, ಮಂತ್ರಿಗಳು ಆಗಿದ್ದಾರೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇವತ್ತು ವಿಷಯ ಸದನಸಮಿತಿಗಳಲ್ಲಾಗಲೀ, ಅಥವಾ ನ್ಯಾಯಾಂಗದಲ್ಲಾಗಲೀ, ಎಷ್ಟು ಜನ ಅಧ್ಯಕ್ಷ ಪದವಿಯಲ್ಲಿದ್ದಾರೆ? ಇವತ್ತು ಬೇಕಾದಷ್ಟು ಕಾರ್ಪೋರೇಷನ್‌ಗಳಿಗೆ ನೇಮಕವನ್ನು ಮಾಡಿದ್ದೀರಿ. ಆದರೆ ಪರಿಶಿಷ್ಟ ಪಂಗಡದವರಿಗೆ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ಅವಲೋಕನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ನಾಗರಹೊಳೆಯಲ್ಲಿರುವಂಥವರಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡುವ ಬಗ್ಗೆ ಕೂಡ ತಾವು ದೀರ್ಘವಾಗಿ ಆಲೋಚನೆ ಮಾಡಿ ಅದನ್ನು ಕಾರ್ಯಗತ ಮಾಡಬೇಕೆಂದು

ಹೇಳಿಕೊಂಡು ತಾವು ಉದಾರವಾಗಿ ನನಗೆ ಇಷ್ಟೊಂದು ಸಮಯವನ್ನು ನೀಡಿದ್ದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಲಾಗಿದೆ. ನಾವು ಪುನಃ ನಾಳೆ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲಿದ್ದೇವೆ.

(ಸದನವು ರಾತ್ರಿ 9 ಗಂಟೆ 52 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 3ನೇ ಸೆಪ್ಟೆಂಬರ್ ಮಾಹೆ 1997ರ ಬುಧವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)